ಪಾಕ್ಷಿಕ

# ಪ್ರಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ಬೆಂಗಳೂರು: ವಿಕ್ರಮ ವಾರಪತ್ರಿಕೆಯ ಅಮೃತ ಸಂಭ್ರಮ ಕಾರ್ಯಕ್ರಮಗಳ ಸಮಾರೋಪ ಸಮಾರಂಭ ಹಾಗೂ ವಿಕ್ರಮ ಅಮೃತ ಪಥ ಸ್ಮರಣಸಂಚಿಕೆ ಲೋಕಾರ್ಪಣೆ ಕಾರ್ಯಕ್ರಮ ಡಿಸೆಂಬರ್ 1, 2023 ರಂದು ಜಯನಗರದ ಆರ್ ವಿ ಟೀಚರ್ಸ್ ಕಾಲೇಜಿನಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಪೂಜ್ಯ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಭಾಗವಹಿಸಿದರು.

ಸಂಪುಟ : 45 | ಸಂಚಿಕೆ : 16 | ಕಾರ್ತಿಕ-ಮಾರ್ಗಶಿರ | ಕಲಿಯುಗಾಬ್ದ 5125 | 15-12-2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

## ರಾಮಮಂದಿರ ಆಂದೋಲನ: ಸಂವಿಧಾನಾತ್ಮಕ ಹೋರಾಟದ ಮೈಲಿಗಲ್ಲುಗಳು

ಶ್ರೀ ರಾಮ ಜನ್ಮಭೂಮಿ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕಾಗಿ ನಡೆದ ಹೋರಾಟವು ಜಗತ್ತಿನ ಅತ್ಯಂತ ಕಾನೂನುಬದ್ಧ ಆಂದೋಲನ ಎಂಬುದು ಅನೇಕ ತಜ್ಞರ ಸ್ಪಷ್ಟ ಅಭಿಮತ. ಏಕೆಂದರೆ ರಾಮಜನ್ಮಭೂಮಿಯಲ್ಲೇ ರಾಮಮಂದಿರ ನಿರ್ಮಾಣಗೊಳ್ಳುತ್ತಿರುವ ಇಂದಿನ ನಮ್ಮೆಲ್ಲರ ಸಂಭ್ರಮದ ಹಿಂದೆ 134 ವರ್ಷಗಳ ಸುದೀರ್ಘ ನ್ಯಾಯಾಂಗದ ಮೂಲಕ ಹೋರಾಟ ನಡೆದಿದೆ. ನ್ಯಾಯಾಲಯದ ಮೂಲಕ ನಡೆದ ಹೋರಾಟದ ಪ್ರಮುಖ ಮೈಲಿಗಲ್ಲುಗಳನ್ನು ಈ ಲೇಖನದಲ್ಲಿ ನೀಡಲಾಗಿದೆ.

**1885:** ನ್ಯಾಯಾಲಯದ ಮೂಲಕ ನ್ಯಾಯವನ್ನು ಪಡೆಯುವ ಪ್ರಕ್ರಿಯೆಗೆ ನಾಂದಿಯನ್ನು ಹಾಡಿದ್ದು ಮಹಂತ ರಘುವೀರ ದಾಸರು. 1885ರಲ್ಲಿ ರಾಮಜನ್ಮಸ್ಥಾನದ ಪೂರ್ವದಿಕ್ಕಿನ ಚಬೂತರಾದಲ್ಲಿ ದೇವಾಲಯ ನಿರ್ಮಾಣಕ್ಕೆ ಅವಕಾಶಕೋರಿ ಫೈಜಾಬಾದ್ ಜಿಲ್ಲಾ ನ್ಯಾಯಾಲಯಕ್ಕೆ ಮನವಿ ಮಾಡುತ್ತಾರೆ. ಆದರೆ ಫೈಜಾಬಾದ್ ನ್ಯಾಯಾಲಯ ಈ ಮನವಿಯನ್ನು ನಿರಾಕರಿಸುತ್ತದೆ.

**1949:** ಡಿಸೆಂಬರ್ 22ರ ಮಧ್ಯರಾತ್ರಿ ಅಂದಿನ ಮಸೀದಿಯ ಒಳಗೆ ರಾಮಲಕ್ಷ್ಮಣ ವಿಗ್ರಹಗಳು ಕಾಣಿಸಿಕೊಂಡವು. ಈ ಪ್ರಕ್ರಿಯೆಯನ್ನು ಅಸಂಖ್ಯಾತ ಹಿಂದುಗಳು ಒಂದು ದೈವಿಕ ಬದಲಾವಣೆಯೆಂದು ಭಾವಿಸಿ ಕೀರ್ತನೆಸತ್ರಗಳನ್ನು ಆರಂಭಗೊಳಿಸಿದರು. ಅಂದೇ ಅಲ್ಲಿ ವಿಧ್ಯುಕ್ತವಾಗಿ ಶ್ರೀರಾಮಲಲ್ಲಾ ವಿಗ್ರಹ ಸ್ಥಾಪನೆಗೊಂಡಿತು. ಈ ಬೆಳವಣಿಗೆಯಿಂದ ಅಯೋಧ್ಯೆಯ ರಾಮಜನ್ಮಭೂಮಿಯ ಸ್ಥಳವನ್ನು ಸರ್ಕಾರ 'ವಿವಾದಿತ ಪ್ರದೇಶ' ಎಂದು ಗುರುತಿಸಿ ಬೇಲಿಯನ್ನು ಹಾಕಿತು.

**1950:** ಗೋಪಾಲಸಿಂಗ್ ಮತ್ತು ಪರಮಹಂಸ ರಾಮಚಂದ್ರದಾಸ್ ಎಂಬ ಇಬ್ಬರು ರಾಮಭಕ್ತರು ರಾಮಜನ್ಮಭೂಮಿಯಲ್ಲಿ ರಾಮನ ಪ್ರತ್ಯಕ್ಷಪೂಜೆಗೆ ಅವಕಾಶವನ್ನು ಕಲ್ಪಿಸಿಕೊಡಬೇಕು ಎಂದು 2 ಮೊಕದ್ದಮೆಗಳನ್ನು ಹೂಡಿದರು. ಅದಕ್ಕೆ ನ್ಯಾಯಲಯವು ಸಮ್ಮತಿಸಿತಾದರೂ ವಿವಾದಿತ ಕಟ್ಟಡದ ಒಳಾಂಗಣದ ಬಾಗಿಲು ಮುಚ್ಚಿರಬೇಕು ಎಂದು ತಿಳಿಸಿತು.

**1950ರ ದಶಕ:** 1955ರಲ್ಲಿ 4 ವರ್ಷಗಳಾದರೂ ದಾವೆ ಇತ್ಯರ್ಥವಾಗದ ಕಾರಣ ತ್ವರಿತ ಗತಿಯಲ್ಲಿ ತೀರ್ಪು ಬರಲಿ ಎಂದು ಅಲಹಾಬಾದ್ ಹೈಕೋರ್ಟ್ ಟಿಪ್ಪಣಿ ನೀಡಿತು. 1959ರಲ್ಲಿ ರಾಮಜನ್ಮಭೂಮಿ ತನಗೆ ಸಂಬಂಧಿಸಿದೆಂದು ಘೋಷಿಸಿಕೊಂಡು, ಅದನ್ನು ತನಗೆ ನೀಡಬೇಕೆಂದು ನಿರ್ಮೋಹಿ ಆಖಾಡಾ ರಾಮಜನ್ಮಭೂಮಿಯ ಕುರಿತಾದ ಮೂರನೇ ಅರ್ಜಿ ಸಲ್ಲಿಸಿದರು.

**1961:** ಉತ್ತರ ಪ್ರದೇಶದ ಸುನ್ನಿ ವಕ್ಫ್ ಬೋರ್ಡ್ ಬಾಬ್ರಿ ಮಸೀದಿಯ ಜಾಗವು ತನಗೆ ಸಂಬಂಧಿಸಿದ್ದೆಂದು ನ್ಯಾಯಾಲಯಕ್ಕೆ ಅರ್ಜಿಸಲ್ಲಿಸಿತು. ಅಷ್ಟೇ ಅಲ್ಲದೇ ಮಸೀದಿಯಲ್ಲಿದ್ದರುವ ರಾಮನ ಮೂರ್ತಿಯನ್ನು ಅಲ್ಲಿಂದ ತೆಗೆಯಬೇಕು ಎಂಬ ಬೇಡಿಕೆ ಸಲ್ಲಿಸಿತು.

**1980ರ ದಶಕ:** ಫೆಬ್ರವರಿ 1, 1986 ರಂದು ಸರ್ಕಾರದ ಆದೇಶದಂತೆ ಮುಚ್ಚಲಾಗಿದ್ದ ವಿವಾದಿತ ಕಟ್ಟಡದ ಒಳಾಂಗಣದ ದ್ವಾರವನ್ನು ತೆರೆಯಬೇಕೆಂದು ನ್ಯಾಯವಾದಿ ಯು ಸಿ ಪಾಂಡೆ ಫೈಜಾಬಾದ್ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದರು. ಈ ಮನವಿಗೆ ಸ್ಪಂದಿಸಿದ ಜಿಲ್ಲಾ ನ್ಯಾಯಮೂರ್ತಿಗಳು ಮುಚ್ಚಲಾಗಿರುವ ಸ್ಥಳವನ್ನು ಬಂಧಮುಕ್ತಗೊಳಿಸಿ ಹಿಂದೂಗಳಿಗೆ ಪೂಜೆ ಮತ್ತು ದರ್ಶನ ಮಾಡುವುದಕ್ಕೆ ಬಿಡಬೇಕೆಂದು ತಿಳಿಸಿತು. ಅದೇ ಸಮಯದಲ್ಲಿ ಬಾಬ್ರಿ ಮಸೀದಿ ಕ್ರಿಯಾ ಸಮಿತಿ (Babri Mosque Action Committee) ರಚನೆಗೊಂಡಿತು. 1989ರ ನವೆಂಬರ್ 9 ರಂದು ಕೇಂದ್ರ ಸರ್ಕಾರ ವಿಶ್ವ ಹಿಂದೂ ಪರಿಷತ್‌ಗೆ ವಿವಾದಿತ ಪ್ರದೇಶದಲ್ಲಿ ಶಿಲಾನ್ಯಾಸ ನಡೆಸಲು ಅನುವು ಮಾಡಿಕೊಟ್ಟಿತು. ಅದೇ ವರ್ಷ ಫೈಜಾಬಾದ್ ಜಿಲ್ಲಾ ನ್ಯಾಯಲಯದಿಂದ ರಾಮಜನ್ಮಭೂಮಿಯ ವಿವಾದಿತ ಪ್ರದೇಶದ ಕುರಿತಾದ ಎಲ್ಲಾ ಮೊಕದ್ದಮೆಗಳು ಅಲಹಾಬಾದ್ ಉಚ್ಚ ನ್ಯಾಯಾಲಯಕ್ಕೆ ಹಸ್ತಾಂತರವಾಯಿತು. ಜೊತೆಗೆ ನಿರ್ಮೋಹಿ ಆಖಾಡಾ (1959) ಮತ್ತು ಸುನ್ನಿ ವಕ್ಫ್ ಬೋರ್ಡ್ (1961) ಮೊಕದ್ದಮೆಗಳಲ್ಲಿರುವ ಕಕ್ಷಿದಾರರನ್ನು ಪ್ರತಿವಾದಿಗಳಾಗಿ ಹೆಸರಿಸಿ



ಭಾಗ-2

ರಾಮ್ ಲಲ್ಲಾ ವಿರಾಜಮಾನ್ ಎಂಬ ಹೆಸರಿನಲ್ಲಿ ಮತ್ತೊಂದು ಮೊಕದ್ದಮೆಯನ್ನು ಹೈಕೋರ್ಟ್‌ನಲ್ಲಿ ಸಲ್ಲಿಸಲಾಯಿತು.

**1990-1992:** 1990ರ ಸೆಪ್ಟೆಂಬರ್ 25ರಂದು ಎಲ್ ಕೆ ಅಡ್ವಾನಿ ಅವರು ಗುಜರಾತಿನ ಸೋಮನಾಥದಿಂದ ಉತ್ತರಪ್ರದೇಶದ ಅಯೋಧ್ಯೆಯವರೆಗೆ ರಥಾಯಾತ್ರೆಯನ್ನು ಪ್ರಾರಂಭಿಸುತ್ತಾರೆ. 1992 ಡಿಸೆಂಬರ್ 6 ರಂದು ವಿವಾದಿತ ಕಟ್ಟಡವನ್ನು ಕಾರಸೇವಕರು ನೆಲಸಮಗೊಳಿಸುತಾರೆ. 1992ರ ಡಿಸೆಂಬರ್‌ನಲ್ಲಿ ಕೇಂದ್ರ ಸರ್ಕಾರವು ವಿವಾದಿತ ಕಟ್ಟಡ ಧ್ವಂಸ ಮತ್ತು ಕೋಮು ಸಂಘರ್ಷಕ್ಕೆ ಕಾರಣಗಳನ್ನು ತಿಳಿಯಲು ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿ ಎಂ. ಎಸ್. ಲಿಬರ್ಹಾನ್ ಅವರ ನೇತೃತ್ವದಲ್ಲಿ ಕಮಿಟಿಯನ್ನು ನೇಮಿಸಿ ಮೂರು ತಿಂಗಳೊಳಗೆ ವರದಿ ನೀಡಲು ಸೂಚಿಸುತ್ತದೆ.

**1993:** ಜನವರಿ 7ರಂದು ಕೇಂದ್ರ ಸರ್ಕಾರ ವಿವಾದಿತ ಪ್ರದೇಶದ ಸುತ್ತಮುತ್ತಲಿನ 67.7 ಎಕರೆ ಪ್ರದೇಶವನ್ನು ರಾಜ್ಯ ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಳ್ಳಲು ಸುಗ್ರೀವಾಜ್ಞೆ ಹೊರಡಿಸಿತು. ಏಪ್ರಿಲ್ 3, 1993 ರಂದು ಇದು Acquisition of Certain Areas at Ayodhya Act-1993 ಕಾಯಿದೆಯಾಗಿ ರೂಪುಗೊಂಡಿತು. ಕೇಂದ್ರಸರಕಾರವು ಅಯೋಧ್ಯೆಯ "ಕೆಲಪ್ರದೇಶಗಳ ಸ್ವಾಧೀನ ಕಾಯ್ದೆ"ಯನ್ನು ಅಂಗೀಕರಿಸಿತು. ಅಲಹಾಬಾದ್ ಹೈಕೋರ್ಟ್‌ನಲ್ಲಿ ಅನೇಕ ರಿಟ್ ಅರ್ಜಿಗಳು ದಾಖಲಾದವು. ಆಗ ರಾಷ್ಟ್ರಪತಿಗಳು ಸುಪ್ರೀಂಕೋರ್ಟಿಗೆ ಬರಹರೂಪದ ಪ್ರಶ್ನೆಯೊಂದನ್ನು ಕೇಳಿ, ಉತ್ತರ ಅಪೇಕ್ಷಿಸಿದರು: (ಸಂವಿಧಾನದ 143 ಧಾರಾದನ್ವಯ) "ಧ್ವಂಸಗೊಂಡ ಜಾಗದಲ್ಲಿ 1528ಕ್ಕಿಂತಲೂ ಮುಂಚೆ ಹಿಂದುಗಳ ಮಂದಿರ ಯಾವುದಾದರೂ ಇತ್ತೇ?" (7.1.1993). ಸರ್ವೋಚ್ಚ ನ್ಯಾಯಾಲಯವು ಇದಕ್ಕೆ ಉತ್ತರ ನೀಡುವ ಹೊಣೆಯನ್ನು ಅಲಹಾಬಾದ್ ಹೈಕೋರ್ಟ್‌ಗೆ ವಹಿಸಿತು.

**1994:** ಇಸ್ಮಾಯಿಲ್ ಫರುಕಿ ತೀರ್ಪು 3-2ರ ಬಹುಮತದಿಂದ ಅಯೋಧ್ಯೆ ಕಾಯಿದೆಯಲ್ಲಿ ಕೆಲವು ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳುವ ಸಾಂವಿಧಾನಿಕತೆಯನ್ನು ಎತ್ತಿಹಿಡಿಯಿತು. ಹಾಗೆಯೇ ಈ ತೀರ್ಪು ನೀಡಿದ ನ್ಯಾಯಮೂರ್ತಿಗಳಲ್ಲಿ ಒಬ್ಬರಾದ ಮಾಜಿ ಸಿಜೆಐ ಜೆ.ಎಸ್. ವರ್ಮ ಅವರು ಪ್ರತಿಯೊಂದು ಧಾರ್ಮಿಕ ಸ್ಥಿರ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳಬಹುದು ಎಂದು ತರ್ಕಿಸಿದ್ದರು. ಹಾಗೆಯೇ ಇಸ್ಲಾಂನಲ್ಲಿ ಮಸೀದಿಗೆ ಯಾವುದೇ ನಿರ್ದಿಷ್ಟ ಪ್ರಾಮುಖ್ಯತೆ ಇಲ್ಲದಿದ್ದರೆ ಮಸೀದಿಯಲ್ಲಿ ನಮಾಜ್ ಮಾಡುವುದು ಇಸ್ಲಾಂಗೆ ಅವಿಭಾಜ್ಯವಲ್ಲ ಎಂದೂ ತೀರ್ಪು ತಿಳಿಸಿದ್ದರು. ಅಕ್ಟೋಬರ್ 14ರಂದು ಭಾರತದ ಸಾಲಿಸಿಟರ್ ಜನರಲ್ಲರು ಸರಕಾರದ ಪರವಾಗಿ ಸುಪ್ರೀಂಕೋರ್ಟಿಗೆ ಪ್ರಮಾಣ ಪತ್ರ ಸಲ್ಲಿಸಿದರು: "ರಾಷ್ಟ್ರಪತಿಗಳು ಕೇಳಿದ ಪ್ರಶ್ನೆಗೆ 'ಹೌದು' ಎಂಬ ಉತ್ತರ ಬಂದಲ್ಲಿ, ಸರಕಾರವು ಹಿಂದುಗಳ ಭಾವನೆಗಳನ್ನು ಗೌರವಿಸಿ ಅದಕ್ಕನುಸಾರ ಕಾರ್ಯಶೀಲವಾಗುತ್ತದೆ. ವ್ಯತಿರಿಕ್ತ ಉತ್ತರ ಒದಗಿಬಂದಲ್ಲಿ ಸರಕಾರ ಮುಸ್ಲಿಂರ ಕೇಳಿಕೆಯನ್ನು ಮನ್ನಿಸುತ್ತದೆ. (Spl. reference No. 1 of 1993 connected to Ayodhya case). ಆಗ ಮುಸಲ್ಮಾನ ನಾಯಕರು "ರಾಮಜನ್ಮಭೂಮಿ ಕುರಿತಾಗಿ ಹಿಂದುಗಳ ನಂಬಿಕೆ ಸರಿಯಾದುದು ಎಂಬ ಸಾಕ್ಷ್ಯ ದೊರೆತಲ್ಲಿ ಮುಸಲ್ಮಾನರು ಸ್ವಇಚ್ಛೆಯಿಂದ ಅದನ್ನು ಹಿಂದುಗಳಿಗೆ ಒಪ್ಪಿಸುತ್ತಾರೆ" ಎಂದರು.

**2000-2010:** 2002ರಲ್ಲಿ ಅಲಹಾಬಾದ್ ಹೈಕೋರ್ಟ್‌ನ ಲಕ್ನೋ ಪೀಠವು ಅಯೋಧ್ಯೆಯ ವಿವಾದದ ವಿಚಾರಣೆಯನ್ನು ಪ್ರಾರಂಭಿಸುತ್ತದೆ. 2003ರ ಮಾರ್ಚ್ ನಿಂದ ಆಗಸ್ಟ್‌ವರೆಗೆ ಅಲಹಾಬಾದ್ ಉಚ್ಚ ನ್ಯಾಯಾಲಯದ ನಿರ್ದೇಶನದ ಅಡಿಯಲ್ಲಿ ವಿವಾದಿತ ಸ್ಥಳದ ಕೆಳಗಿರುವ ಭೂಮಿಯನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು ಉತ್ಖನನ ಮಾಡಲು ಪ್ರಾರಂಭಿಸುತ್ತದೆ. 10ನೇ ಶತಮಾನದ ಹಿಂದೂ ದೇವಾಲಯದ ಅವಶೇಷಗಳನ್ನು ಹೊಂದಿದೆ ಎಂದು ಹೇಳುತ್ತದೆ. ಮಾರ್ಚ್ 13ಕ್ಕೆ ಸರ್ಕಾರ ವಶಪಡಿಸಿಕೊಂಡಿರುವ ಭೂಮಿಯಲ್ಲಿ ಯಾವುದೇ ಧಾರ್ಮಿಕ ಚಟುವಟಿಕೆಗೆ ಅವಕಾಶ ಇಲ್ಲ ಎಂದು ಸುಪ್ರೀಂಕೋರ್ಟ್ ತೀರ್ಪು ನೀಡುತ್ತದೆ. 2009ರ ಜೂನ್ 30ರಂದು 17 ವರ್ಷಗಳ ನಂತರ ಲಿಬರ್ಹಾನ್ ವರದಿ ಸಲ್ಲಿಕೆಯಾಗುತ್ತದೆ. ಸೆಪ್ಟೆಂಬರ್ 30, 2010ರಂದು ವಿವಾದಿತ 2.77 ಎಕರೆ ಜಮೀನಿನ ಕುರಿತು ತ್ರಿಸದಸ್ಯ ಪೀಠವು ಗಮನಾರ್ಹ ತೀರ್ಪು ನೀಡಿತು. ಅದರನ್ವಯ 2.77 ಎಕರೆ ಜಮೀನಿನ 2/3 ಭಾಗ ಹಿಂದುಗಳಿಗೆ (1/3 ರಾಮಲಲ್ಲಾ, 1/3 ನಿರ್ಮೋಹಿ ಆಖಾಡಾ), 1/3 ಭಾಗ ಮುಸಲ್ಮಾನರಿಗೆ ಎಂದು ತ್ರಿಸದಸ್ಯ ಪೀಠ ಹೇಳಿತು. 1992ರಲ್ಲಿ ಕಾರಸೇವಕರು ಧ್ವಂಸಗೊಳಿಸಿದ ವಿವಾದಿತ ಕಟ್ಟಡದ ಪ್ರಮುಖ ಸ್ಥಳ ರಾಮಲಲ್ಲಾನಿಗೆ, ರಾಮ ಚಬೂತರಾ ಹಾಗೂ ಸೀತಾ ರಸೋಯಿ ನಿರ್ಮೋಹಿ ಆಖಾಡಾಕ್ಕೆ ಹಾಗೂ ವಿವಾದಿತ ಕಟ್ಟಡದ ಅಂಗಳದ ಭಾಗ ವಕ್ಫ್ ಬೋರ್ಡ್‌ಗೆ ಎಂದು ತಿಳಿಸಿತು.

**2010 ನಂತರದ ನ್ಯಾಯಾಂಗ ಪ್ರಕ್ರಿಯೆ:** 2010ರ ತೀರ್ಪಿನ ಕುರಿತು ಎಲ್ಲಾ ಪಕ್ಷಗಳು ಪಿಟಿಷನ್ ಹಾಕಿದ್ದರಿಂದ ಮೇ 9 ರಂದು 10.9.2010ರ 2.77 ಎಕರೆ ಜಮೀನು ಹಂಚಿಕೆ ಕುರಿತಾದ ತೀರ್ಪನ್ನು ಸುಪ್ರೀಂಕೋರ್ಟ್ ರದ್ದುಮಾಡಿತು. 2017, ಮಾರ್ಚ್ 21ರಂದು ಮುಖ್ಯ ನ್ಯಾಯಮೂರ್ತಿ ಜೆ.ಎಸ್. ಖೇಹರ್, ಈ ವಿವಾದವು ಮಾತುಕತೆಗಳ ಮೂಲಕ ಇತ್ಯರ್ಥವಾಗಲಿ ಎಂಬ ಆಶಯ ವ್ಯಕ್ತಪಡಿಸಿದರು. 2017ರ ಆಗಸ್ಟ್ 7 ರಂದು 1994ರ ಅಲಹಾಬಾದ್ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿದ ಅರ್ಜಿಯನ್ನು ಮೂರು ನ್ಯಾಯಾಧೀಶರ ಪೀಠಕ್ಕೆ ವರ್ಗಾಯಿಸಲಾಯಿತು. ನವೆಂಬರ್ 20, 2017ರಂದು ಅಯೋಧ್ಯೆಯಲ್ಲಿ ರಾಮಮಂದಿರವನ್ನೂ, ಲಕ್ನೋದಲ್ಲಿ ಮಸೀದಿಯನ್ನೂ ನಿರ್ಮಿಸಲು ನಮಗೆ ಒಪ್ಪಿಗೆ ಇದೆಯೆಂದು ಉತ್ತರ ಪ್ರದೇಶ ಶಿಯಾ ಸೆಂಟ್ರಲ್ ಬೋರ್ಡ್ ಸುಪ್ರೀಕೋರ್ಟ್‌ಗೆ ತಿಳಿಸಿತು.

2017ರ ಆಗಸ್ಟ್ 11ರಂದು ದೀಪಕ್ ಮಿಶ್ರಾ, ಅಶೋಕ್ ಭೂಷಣ್ ಮತ್ತು ಅಬ್ದುಲ್ ನಜೀರ್ ಎಎ ಅವರನ್ನೊಳಗೊಂಡ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಪೀಠವು ಮೇಲ್ಮನವಿಯ ವಿಚಾರಣೆಯನ್ನು ಪ್ರಾರಂಭಿಸಿತು. 2018ರ ಫೆಬ್ರವರಿ - ಜುಲೈ ವೇಳೆಗೆ ಅರ್ಜಿದಾರರು 1994ರ ಇಸ್ಮಾಯಿಲ್ ಫರುಕಿ ತೀರ್ಪನ್ನು ಮರುಪರಿಶೀಲನೆಗಾಗಿ 7 ನ್ಯಾಯಾಧೀಶರ ಪೀಠ ರಚಿಸಬೇಕು ಎಂದು ವಾದಿಸುತ್ತಾರೆ. ಜುಲೈ 20, 2018ರಂದು ದೊಡ್ಡ ಪೀಠ ರಚಿಸುವ ಮೇಲ್ಮನವಿಯ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯ ಕಾಯ್ದಿರಿಸಿ ಸೆಪ್ಟೆಂಬರ್ 2, 2018ರಲ್ಲಿ 1994ರ ಇಸ್ಮಾಯಿಲ್ ಫರುಕಿ ತೀರ್ಪನ್ನು ದೊಡ್ಡ ಪೀಠದಿಂದ ಮರುಪರಿಶೀಲಿಸುವ ಅಗತ್ಯವಿಲ್ಲ ಎಂದು ಹೇಳಿತು.

ಜನವರಿ 8, 2019ರಂದು ಸಿಜೆಐ ರಂಜನ್ ಗೊಗೊಯ್ ಅವರು ತಮ್ಮ ಆಡಳಿತಾತ್ಮಕ ಅಧಿಕಾರವನ್ನು ಬಳಸಿಕೊಂಡು 5 ನ್ಯಾಯಾಧೀಶರ ಸಂವಿಧಾನ ಪೀಠದ ಮುಂದೆ ವಿಷಯವನ್ನು ಪಟ್ಟಿ ಮಾಡಿದರು. ಸೆಪ್ಟೆಂಬರ್ 2018ರ ತೀರ್ಪನ್ನು ರದ್ದುಗೊಳಿಸಿದರು. 26.2.2018ರಂದು ಮಾತುಕತೆಯ ಮೂಲಕ ಪ್ರಕರಣ ಇತ್ಯರ್ಥವಾಗಲಿ ಮತ್ತು ಮಧ್ಯವರ್ತಿಗಳು 5.3.2019ರೊಳಗೆ ಮಾತುಕಥೆ ಪ್ರಗತಿ ಕುರಿತು ವರದಿ ಮಾಡಬೇಕು ಎಂದಿತು ಸುಪ್ರೀಂಕೋರ್ಟ್.

4ನೇ ಪುಟಕ್ಕೆ...

## ಸಂಸ್ಮರಣೆ | ಮಹರ್ಷಿ ವಾಲ್ಮೀಕಿ



'ಕೂಜಂತಂ ರಾಮ ರಾಮೇತಿ
ಮಧುರ ಮಧುರಾಕ್ಷರಮ್
ಆರುಹ್ಯ ಕವಿತಾಶಾಖಾಂ
ವಂದೇ ವಾಲ್ಮೀಕಿ ಕೋಕಿಲಮ್'

ಕಾವ್ಯವೆಂಬ ಮರದ ಮೇಲೆ ಕುಳಿತು ರಾಮ ರಾಮ ಎಂದು ಇಂಪಾಗಿ, ರಾಗ ಮತ್ತು ಲಯಬದ್ಧವಾಗಿಯೂ ಹಾಡುತ್ತಿರುವ ವಾಲ್ಮೀಕಿ ಎಂಬ ಕೋಗಿಲೆಗೆ ನಮಸ್ಕಾರ ಎನ್ನುತ್ತದೆ ಮೇಲಿನ ಸ್ತೋತ್ರ.

ವಾಲ್ಮೀಕಿ ಈ ನೆಲದ ಶ್ರೇಷ್ಠ ಕವಿ. ಅವರು ಹಿಂದೂ ಧರ್ಮದಲ್ಲಿನ ಪ್ರಮುಖ ಗುರುಗಳಲ್ಲಿ ಒಬ್ಬರು. ಶ್ರೀ ರಾಮನಿಗೆ ದೈವತ್ವದ ಸ್ಥಾನವನ್ನು ಒದಗಿಸಿ ರಾಮಾಯಣ ಎಂಬ ಮಹಾಕಾವ್ಯವನ್ನು ಬರೆದವರು. ರಾಮನನ್ನು ಭಕ್ತಿಯಿಂದ ಸ್ತುತಿಸುವ ನಾವು ವಾಲ್ಮೀಕಿಯನ್ನೂ ಸ್ತುತಿಸಬೇಕು. 'ರಾಮ' ಎಂಬ ಎರಡಕ್ಷರದ ಅದ್ಭುತವನ್ನು ಜಗಜ್ಜಾಹೀರು ಗೊಳಿಸಿದವರು ವಾಲ್ಮೀಕಿ. ವಾಲ್ಮೀಕಿ ಎಂಬ ಒಬ್ಬ ಸಾಮಾನ್ಯ ವ್ಯಕ್ತಿ ರೋಚಕ ಎನಿಸುವ ರಾಮಾಯಣವನ್ನು ಬರೆಯದೇ ಹೋಗಿದ್ದರೆ ನಮಗೆ ರಾಮ, ಲಕ್ಷ್ಮಣ, ಸೀತೆ, ಹನುಮಾ ಯಾರೊಬ್ಬರೂ ಗೊತ್ತಾಗುತ್ತಿರಲಿಲ್ಲ. 'ರಾಮ' ಮಂತ್ರವನ್ನು ಎದೆಯಲ್ಲಿ ಬಿತ್ತಿಕೊಂಡು ರಾಮನ ಕತೆಯನ್ನು ರಾಮಾಯಣವಾಗಿಸಿ ಜಗತ್ತನ್ನು ಬೆರಗುಗೊಳಿಸಿದ ವಾಲ್ಮೀಕಿ ಸರ್ವ ಕಾಲಕ್ಕೂ ಸಲ್ಲುವ ಕವಿ ಮತ್ತು ದೇವ ಋಷಿ.

ವಾಲ್ಮೀಕಿ ಪೂರ್ವ ಹೆಸರು ರತ್ನಾಕರ ಅಂತಲೂ ಅವರು ತಾವು ಯುವಕನಾಗಿದ್ದಾಗ ಬೇಡನಾಗಿ ಕಾಡು ಮೇಡುಗಳಲ್ಲಿ ಅಲೆಮಾರಿಯಂತೆ ಸುತ್ತಾಡುತ್ತಿದ್ದರು ಎಂತಲೂ ರಾಮಾಯಣವನ್ನು ಓದಿದ ಮತ್ತು ಕೇಳಿದ ನಮಗೆ ತಿಳಿದೇ ಇದೆ. ಮುಂದೊಮ್ಮೆ ಭಗವಾನ್ ಶ್ರೀರಾಮನು ವಾಲ್ಮೀಕಿಯೊಳಗೆ ಪ್ರವೇಶಿಸಿ ಅವರನ್ನು ಭಕ್ತನಾಗಿ ಮಾಡಿ, ಬೇಡನೊಬ್ಬನನ್ನು ಮಹಾನ್ ಋಷಿಯಾಗಿಸಿ ರಾಮಾಯಣ ಎಂಬ ಶ್ರೇಷ್ಠ ಮಹಾಕಾವ್ಯವನ್ನು ಬರೆಯುವಂತೆ ಮಾಡಿರಬಹುದು ಎಂದೂ ನಂಬಲಾಗಿದೆ.

**ರಾಮಾಯಣದ ಹುಟ್ಟು:** ವಾಲ್ಮೀಕಿ ಒಮ್ಮೆ ನದಿ ತೀರದಲ್ಲಿ ಸ್ವಚ್ಛಂದವಾಗಿ ಹಾರಾಡುತ್ತಿದ್ದ ಕ್ರೌಂಚಪಕ್ಷಿ ಜೋಡಿಯನ್ನು ನೋಡುತ್ತಿದ್ದಾಗ, ಬೇಡನೊಬ್ಬನು ಬಂದು ಬಾಣ ಹೂಡಿ ಅವುಗಳಲ್ಲಿ ಗಂಡು ಹಕ್ಕಿಯೊಂದನ್ನು ಅನ್ಯಾಯವಾಗಿ ಕೊಂದು ಬಿಡುತ್ತಾನೆ. ಅದರ ಸಂಗಾತಿ ಹೆಣ್ಣು ಹಕ್ಕಿಯು ಅತೀವ ಸಂಕಟದಿಂದ ಚೀರಿಕೊಳ್ಳುತ್ತದೆ. ಹಕ್ಕಿಯೊಂದರ ನೋವಿನ ಸನ್ನಿವೇಶವನ್ನು ನೋಡಿ, ಕರುಣೆ, ದುಃಖ, ಕೋಪದಿಂದ ಮಹರ್ಷಿಗಳು ಬೇಡನನ್ನು ಶಪಿಸುವಾಗ, ಶೋಕದಿಂದ ಬಂದ ಮಾತುಗಳು ಶ್ಲೋಕದ ರೂಪ ಪಡೆಯುತ್ತದೆ. ಇದು ರಾಮಾಯಣ ರಚನೆಗೆ ಪ್ರೇರಣೆಯಾದ ಘಟನೆ ಎಂದು ಹೇಳಲಾಗುತ್ತದೆ.

ಆ ಸಂದರ್ಭಕ್ಕೆ ಪ್ರತಿಕ್ರಿಯೆಯಾಗಿ ಶ್ಲೋಕ ರೂಪದಲ್ಲಿ ವಾಲ್ಮೀಕಿಯವರ ಬಾಯಿಂದ ಹೊರಹೊಮ್ಮಿದ ಮಾತುಗಳನ್ನು ಗಮನಿಸಿ ಆ ವೇಳೆ ಬ್ರಹ್ಮದೇವ ಮಹರ್ಷಿಗಳ ಆಶ್ರಮಕ್ಕೆ ಬಂದು ಇದೇ ಶ್ಲೋಕರೂಪದಲ್ಲಿ ಈ ನೆಲದ ಅದ್ಭುತ ಕತೆಯಾದ ರಾಮಾಯಣ ಕಾವ್ಯವನ್ನು ರಚಿಸಲು ಹೇಳುತ್ತಾರೆ. ನಾರದರಿಂದ ಅವರಿಗೆ ತಿಳಿದಿದ್ದ ರಾಮನ ಕತೆಯನ್ನು ಆಲಿಸಿಕೊಂಡು ವಾಲ್ಮೀಕಿ ಮಹರ್ಷಿಗಳು 24,000 ಶ್ಲೋಕಗಳನ್ನೊಳಗೊಂಡ ಮಹಾಕಾವ್ಯವನ್ನು ಬರೆದರು. ಮುಂದೆ ರಾಮಾಯಣ ಮನೆಮನೆಯ ಮಾತಾಯಿತು. ರಾಮ ದೇವರಾದನು. ರಾಮನನ್ನು ಎಲ್ಲವೂ ಆಗಿಸಿದ ವಾಲ್ಮೀಕಿ ಆದಿಕವಿ ಅಷ್ಟೇ ಅಲ್ಲ ರಸ ಕವಿ, ಋಷಿ ಕವಿ, ಭಾರತವೆಂಬ ಪುಣ್ಯ ನೆಲದ ಅದ್ಭುತ ಕವಿ.

ವಾಲ್ಮೀಕಿಯನ್ನು ಸ್ಮರಿಸಲೆಂದೇ ಆಶ್ವಯುಜ ಶುದ್ಧ ಹುಣ್ಣಿಮೆಯ ದಿನವನ್ನೇ ಮಹರ್ಷಿ ವಾಲ್ಮೀಕಿ ಜಯಂತಿ ಎಂದು ಆಚರಿಸಲಾಗುತ್ತಿದೆ. ಈ ನೆಲದ ಕತೆಯನ್ನು ಬರೆದ ವಾಲ್ಮೀಕಿಯನ್ನೇ ನಾಯಕನನ್ನಾಗಿಸಿ ಎಷ್ಟೋ ಕವಿಗಳು ಇಲ್ಲಿಯವರೆಗೆ ಸಾಕಷ್ಟು ಬೆರಗಿನ ಕೃತಿಗಳನ್ನು ಬರೆದಿದ್ದಾರೆ.

## ಸ್ವಾವಲಂಬಿ ಬದುಕಿಗೆ ಆಸರೆ ಶಬರಿ ಸೇವಾ ಸಮಿತಿ

ಮಹಾರಾಷ್ಟ್ರದ ಕರ್ಜತ್ ತಾಲೂಕಿನ ವನವಾಸಿ ಕ್ಷೇತ್ರದಲ್ಲಿ ಪ್ರತೀ ವರ್ಷ 70 ರಿಂದ 80 ಮಕ್ಕಳು ಅಪೌಷ್ಟಿಕತೆಗೆ ಬಲಿಯಾಗುತ್ತಿದ್ದರು. ಇಂತಹ ಮಕ್ಕಳನ್ನು ಪೋಷಿಸಿ ದೇಶದ ಭವಿಷ್ಯವನ್ನು ಉಳಿಸುವುದು ಹೇಗೆ? ಎಂಬ ಪ್ರಶ್ನೆ ಬಾಲ್ಯದಿಂದಲೇ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರಾಗಿದ್ದ ಪ್ರಮೋದ್ ವಸಂತ್ ಅವರನ್ನು ವಿಚಲಿತಗೊಳಿಸಿತ್ತು. ಹಲವು ವರ್ಷಗಳ ಕಾಲ ಕಲ್ಯಾಣಾಶ್ರಮದಲ್ಲಿ ಪೂರ್ಣಾವಧಿಯಾಗಿ ಕಾರ್ಯ ನಿರ್ವಹಿಸಿದ್ದ ಪ್ರಮೋದ್ ಅವರು ಆಶ್ರಮದ ಮೂಲಕ ವನವಾಸಿ ಕ್ಷೇತ್ರಗಳ ಪರಿಸ್ಥಿತಿಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಅಪೌಷ್ಟಿಕತೆಯ ಬಗ್ಗೆ ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಸಲುವಾಗಿ ಅವರು 2003ರಲ್ಲಿ ಶಬರಿ ಸೇವಾ ಸಮಿತಿಗೆ ಅಡಿಪಾಯ ಹಾಕಿದರು.

ತಮ್ಮ ಧರ್ಮಪತ್ನಿಯಾದ ಶ್ರೀಮತಿ ರಂಜನಾ ಪ್ರಮೋದ್ ಅವರೊಂದಿಗೆ ಕರ್ಜತ್ ಜಿಲ್ಲೆಯ ಕೆಲವು ಗ್ರಾಮಗಳಿಂದ 2ತಿಂಗಳಿನಿಂದ ಹಿಡಿದು 5 ವರ್ಷದ ವರೆಗಿನ ಅಪೌಷ್ಟಿಕತೆ ಇರುವ ಸುಮಾರು 700 ಮಕ್ಕಳನ್ನು ಗುರುತಿಸಿದರು. ಆ ಎಲ್ಲಾ ಮಕ್ಕಳನ್ನು ಸ್ವಚ್ಛಗೊಳಿಸಿ, ನಿಯಮಿತ ವೈದ್ಯಕೀಯ ತಪಾಸಣೆ, ಪೌಷ್ಟಿಕ ಆಹಾರವನ್ನು ವಿತರಿಸಿದರು. ಇದರೊಂದಿಗೆ ಗರ್ಭಿಣಿ ಸ್ತ್ರೀಯರ ಪೌಷ್ಟಿಕತೆಯ ಬಗ್ಗೆಯೂ ಗಮನ ಹರಿಸಿದ್ದರು. ಜೊತೆಗೆ ಮಕ್ಕಳ ಪೋಷಕರನ್ನು ಶಿಕ್ಷಿತರನ್ನಾಗಿಸಿದರು. ಆಶ್ಚರ್ಯದ ವಿಷಯವೆಂದರೆ 2002ರ ತನಕ ಈ ತಾಲೂಕಿನಲ್ಲಿ ಎಲ್ಲಿ 70–80 ಮಕ್ಕಳು ಅಪೌಷ್ಟಿಕತೆಯಿಂದಾಗಿ ಸಾವನ್ನಪ್ಪುತ್ತಿದ್ದರೋ ಅಲ್ಲಿ 2008ರ ಹೊತ್ತಿಗೆ ಸಾವಿನ ಸಂಖ್ಯೆ 3–4ಕ್ಕೆ ಇಳಿಯಿತು, ಅಂದರೆ ಇಲ್ಲಿಯ ತನಕ 20,000 ಮಕ್ಕಳ ಪ್ರಾಣವನ್ನು ಉಳಿಸಲಾಗಿದೆ!

ರಾಯಗಡ, ಪಾಲ್ಘರ್, ಠಾಣೆ, ನಂದೂರಬಾರ್, ಧುಲೆ, ಜಲಗಾಂವ್, ಸೇಂಧ್ವಾ, ದಾದರ್ ನಾಗರ್ ಹವೇಲಿ ಗ್ರಾಮವಾಸಿಗಳಿಗೆ ಸಹಾಯ ಮಾಡುತ್ತಿರುವ ಶಬರಿ ಸೇವಾ ಸಮಿತಿಯ ಕಾರ್ಯವು 1600ಕ್ಕೂ ಹೆಚ್ಚು ಹಳ್ಳಿಗಳಲ್ಲಿ ನಡೆಯುತ್ತಿದೆ. ಇದರಲ್ಲಿ ವನವಾಸಿ ಕ್ಷೇತ್ರದ 47 ಕಾರ್ಯಕರ್ತರು ಕಾರ್ಯನಿರ್ವಹಿಸುತ್ತಿದ್ದಾರೆ.



ಶಬರಿ ಸೇವಾ ಸಮಿತಿಯು 2006ರಲ್ಲಿ ಸರ್ಕಾರಿ, ಖಾಸಗಿ ಶಾಲೆಗಳಲ್ಲಿ ಹಾಗೂ ಗ್ರಾಮಗಳಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ಆಯೋಜಿಸಿ, ಪ್ರತೀ ಜನ್ಮಾಷ್ಟಮಿಯಂದು ಮೊಸರು ಕುಡಿಕೆಯ ರೀತಿಯಲ್ಲಿ ಪುಸ್ತಕ ಹಾಂಡಿ ಉತ್ಸವವನ್ನು ಪ್ರಾರಂಭಿಸಿದರು. ಇದರ ಆಶ್ರಯದಲ್ಲಿ ಮಕ್ಕಳಿಗೆ ರಾಮಾಯಣ, ಮಹಾಭಾರತ ಹಾಗೂ ನೈತಿಕ ಶಿಕ್ಷಣದ ಅನೇಕ ಪುಸ್ತಕಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಕರ್ಜತ್ ತಾಲೂಕಿನ ಕಶೆಲೆ ಗ್ರಾಮದಲ್ಲಿ ಉಚಿತ ವಿದ್ಯಾರ್ಥಿ ನಿಲಯವಿದ್ದು ಇಲ್ಲಿ 35 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಅಷ್ಟೇ ಅಲ್ಲದೇ ಹೆಣ್ಣುಮಕ್ಕಳಿಗಾಗಿ ಶೈಕ್ಷಣಿಕ ಶಿಬಿರಗಳು ಹಾಗೂ ಮಕ್ಕಳ ಜೊತೆಗೆ ಮಾತೆಯರಿಗೂ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಹಳ್ಳಿಗಳಲ್ಲಿ 10 ಉಚಿತ ಗ್ರಂಥಾಲಯವನ್ನೂ ಪ್ರಾರಂಭಿಸಲಾಗಿದೆ. ಇಲ್ಲಿ ಸುಮಾರು 10 ಹೊಲಿಗೆ ಕೇಂದ್ರಗಳು ನಡೆಯುತ್ತಿದ್ದು, ಇದರಲ್ಲಿ 750 ಮಹಿಳೆಯರು ತರಬೇತಿ ಪಡೆದಿದ್ದು 480 ಮಹಿಳೆಯರು ಸ್ವಾವಲಂಬಿಗಳಾಗಿದ್ದಾರೆ. 460 ವಿಕಲಾಂಗರಿಗೆ ಹಾಗೂ ನೇತ್ರಹೀನರಿಗೆ ಶಬರಿ ಸೇವಾ ಸಮಿತಿಯ ಮೂಲಕ ಸ್ವ ಉದ್ಯೋಗಕ್ಕೆ ಹಲವು ರೀತಿಯ ಸಹಾಯ ದೊರೆಯುತ್ತಿದೆ.

ಪಾಲ್ಘರ್, ಸತ್ಪುರದಂತಹ ಹಲವು ಪ್ರದೇಶಗಳನ್ನು ಒಳಗೊಂಡ ವನವಾಸಿ ಗುಡ್ಡಗಾಡು ಪ್ರದೇಶಗಳಲ್ಲಿ ಶಬರಿ ಸೇವಾ ಸಮಿತಿಯಿಂದ ಸುಮಾರು 950 ಎಕರೆ ಭೂಮಿಯಲ್ಲಿ ನೀರಾವರಿ ವ್ಯವಸ್ಥೆ ಮಾಡಲಾಗಿದೆ. ಗಿಡಗಳನ್ನು ನೆಡಲು ಪ್ರೇರೇಪಿಸುವ ಮೂಲಕ ಧಡಗಾಂವ್, ಜವ್ಹಾರ್, ಅಕ್ಕಲಕುವ ತಾಲೂಕುಗಳಲ್ಲಿ ಸುಮಾರು 20,000 ಮಾವು ಹಾಗೂ ಇತರೆ ಹಣ್ಣುಗಳ ಮರಗಳನ್ನು ಹಾಗೂ 50,000 ಸಾಗುವಾನಿಯ ಮರಗಳನ್ನು ನೆಡುವ ಮೂಲಕ ಅಲ್ಲಿನ ಪರಿವಾರಗಳನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಪ್ರೇರೇಪಿಸುತ್ತಿದೆ. ನೀರಾವರಿ ಮತ್ತು ಕುಡಿಯುವ ನೀರಿನ ಸಮಸ್ಯೆಯನ್ನು ಮನಗಂಡು ಹಳ್ಳಿಯವರೊಂದಿಗೆ ಸೇರಿ 32 ಬಾವಿಗಳನ್ನು, ಹಲವು ಬೋರ್‌ವೆಲ್‌ಗಳನ್ನು, ಹಲವು ಕುಡಿಯುವ ನೀರಿನ ಟ್ಯಾಂಕ್‌ಗಳನ್ನು ಹಾಗೂ ಕಾಂಕ್ರೀಟ್ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ. ಈ ರೀತಿ ಸೇವಾ ಸಮಿತಿಯ ಮೂಲಕ 5000 ಪರಿವಾರಗಳು ಉದ್ಯೋಗ ಪಡೆದುಕೊಂಡು ಸ್ವಾವಲಂಬಿಯಾಗುವ ಮುಂಚೂಣಿಯಲ್ಲಿದ್ದಾರೆ.

## ಎಲ್ಲೋ ಕೇಳಿದ ಕಥೆ

### ವೈಚಾರಿಕವಾಗಿ ಎದುರಾಳಿಗಳು, ಮಾನವೀಯವಾಗಿ ಪರಮಾಪ್ತರು

ನಾಗಪುರದ ರಾಜಕಾರಣ ಎರಡು ಬಣಗಳಲ್ಲಿ ಹಂಚಿ ಹೋಗಿದ್ದ ಕಾಲ. ಒಂದು ಬಣದ ಮುಖಂಡರು ಬ್ಯಾರಿಸ್ಟರ್ ಅಭ್ಯಂಕರರು; ಇನ್ನೊಂದು ಡಾ। ಮುಂಜೆಯವರ ಬಣ. ಡಾ. ಕೇಶವ ಬಲಿರಾಮ ಹೆಡಗೇವಾರ್ ಅವರು ಡಾ। ಮುಂಜೆಯವರ ಬಣಕ್ಕೆ ಸೇರಿದವರು ಎಂದು ಸಾಮಾನ್ಯವಾಗಿ ತಿಳಿಯಲಾಗುತ್ತಿತ್ತು. ಆದರೆ ಅವರಿಗೆ ಅಭ್ಯಂಕರರ ಜತೆಯಲ್ಲೂ ಅಷ್ಟೇ ಆತ್ಮೀಯತೆ, ಗೌರವವಿತ್ತು. ಅವರ ಮನೆಗೂ ಡಾಕ್ಟರ್‌ಜಿ ಮುಕ್ತವಾಗಿ ಹೋಗಿ ಬರುವ ಪರಿಪಾಠವಿತ್ತು.

ಒಂದು ಭಾನುವಾರ ನಾಗಪುರದಲ್ಲಿ ಸಭೆಯೊಂದು ಏರ್ಪಾಡಾಗಿತ್ತು. ಅಂದು ಅಭ್ಯಂಕರರದೇ ಮುಖ್ಯ ಭಾಷಣ. ಡಾಕ್ಟರ್‌ಜಿ ಆ ಸಭೆಗೆ ತಮ್ಮ ಹಲವಾರು ಮಿತ್ರರ ಜತೆಗೂಡಿ ಹೋಗಿದ್ದರು. ಅಭ್ಯಂಕರರು ಭಾರೀ ಆವೇಶಭರಿತವಾಗಿ ಭಾಷಣ ಮಾಡುತ್ತಿದ್ದರು. ಅವರ ಭಾಷಣವೆಂದರೆ ಬೈಗುಳದ ಅವಿರತ ಸುರಿಮಳೆ! ಮಾತಿನ ಭರದಲ್ಲಿ ಅವರೊಮ್ಮೆ "ಡಾ। ಮುಂಜೆ ಪೂರಾ ಮೋಸಗಾರರು" ಎಂದು ಗುಡುಗಿದರು. ಸಭೆಯಲ್ಲಿ ಕೂತಿದ್ದ ಡಾಕ್ಟರ್‌ಜಿ ಅಷ್ಟೇ ಏರಿದ ಧ್ವನಿಯಲ್ಲಿ "ನಿಜಕ್ಕೂ ಮೋಸಗಾರರು ಬ್ಯಾ. ಅಭ್ಯಂಕರರು" ಎಂದು ಘರ್ಜಿಸಿದರು. ಕ್ಷಣಕಾಲ ಅವಾಕ್ಕಾದ ಬ್ಯಾ. ಅಭ್ಯಂಕರರು, "ಯಾರದು ಹೀಗೆ ಹೇಳಿರುವವರು? ಅಡಗಿ ಕೂತು ಮಾತೇಕೆ? ಧೈರ್ಯ ಇದ್ದಲ್ಲಿ ಮುಂದೆ ಬಂದು ಹೇಳಲಿ? ಎಂದರು.


ಡಾಕ್ಟರ್‌ಜಿ ತಾನಿರುವಲ್ಲೆ ಎದ್ದು ನಿಂತು, "ಮಾತಾಡಿದವನು ನಾನು. ನಿಮ್ಮಲಿ ಆ ಎದೆಗಾರಿಕೆ ಇದ್ದಲ್ಲಿ ಆಧಾರ ಸಹಿತ ನಿಮ್ಮ ಮಾತನ್ನು ಮೊದಲು ಸಾಬೀತುಪಡಿಸಿ" ಎಂದರು. ಸಭೆಯಲ್ಲಿ ಗೊಂದಲ ಸೃಷ್ಟಿಯಾಯಿತು. ಸಭಿಕರಲ್ಲಿ ಹೊಯಿ ನಡೆದು ಸಭೆಯೇ ಬರ್ಖಾಸ್ತಾಯಿತು. ಜನರು ಚೆಲ್ಲಾಪಿಲ್ಲಿಯಾಗಿ ಚದರಿ ಹೋದರು.

ಆಶ್ಚರ್ಯದ ಸಂಗತಿಯೆಂದರೆ ಸಭೆಯಿಂದ ಡಾಕ್ಟರ್‌ಜಿಯವರು ತಮ್ಮ ಮಿತ್ರರ ಜತೆಯಲ್ಲಿ ಹೋಗಿದ್ದುದು ಅಭ್ಯಂಕರರ ಮನೆಗೇನೇ. ಸಭೆಯಲ್ಲಿ ಏನೂ ಆಗಿಯೇ ಇಲ್ಲವೇನೋ ಎಂಬಂತೆ ಅವರಿಬ್ಬರು ಸರಳ ಮಾತುಕತೆಯಲ್ಲಿ ತೊಡಗಿದುದು ಕಂಡು ಜತೆಗಾರರಿಗೆ ನಂಬುವುದೇ ಕಠಿಣವಾಯಿತು.

## ಪುಸ್ತಕ ಪರಿಚಯ

### ವೀ ಆ್ಯಂಡ್ ದಿ ವರ್ಲ್ಡ್ ಅರೌಂಡ್

**ಲೇಖಕರು:** ಡಾ. ಮನಮೋಹನ್ ವೈದ್ಯ
**ಬೆಲೆ:** ರೂ.350
**ಪ್ರಕಾಶಕರು:** ಯಾತ್ರ ಬುಕ್ಸ್




ರಾಷ್ಟ್ರೀಯ ಸ್ವಯಂಸೇವಕ ಸಂಘವು ತನ್ನ ಶತಾಬ್ದಿ ವರ್ಷಾಚರಣೆಯ ಹೊಸ್ತಿಲಲ್ಲಿರುವ ಸಂದರ್ಭದಲ್ಲಿ ಸಂಘದ ಮೈಲಿಗಲ್ಲುಗಳನ್ನು ಸ್ಮರಿಸಿಕೊಳ್ಳಲು, ಪ್ರಮುಖ ವಿಷಯಗಳ ಬಗ್ಗೆ ಸಂಘದ ಚಿಂತನೆಯನ್ನು ತಿಳಿಸುವ ಸಮಯೋಚಿತ ಕನ್ನಡಿ ಈ ಪುಸ್ತಕ. ಇದು ನಮ್ಮ ಪುರಾತನ ಋಷಿಗಳಿಂದ ಕಲಿಸಲ್ಪಟ್ಟಂತೆ, ಅಸಂಖ್ಯಾತ ತಲೆಮಾರುಗಳ ಉತ್ತರಾಧಿಕಾರಿಗಳಿಂದ ಅಭ್ಯಾಸ ಮಾಡಿದಂತೆ ಮತ್ತು ಮಾನವ ಅಸ್ತಿತ್ವದ ಭವ್ಯವಾದ ಯೋಜನೆಯಲ್ಲಿರುವಂತೆ 'ಭಾರತ' ಪರಿಕಲ್ಪನೆಯ ಸೂಕ್ಷ್ಮವಾದ ತಿಳುವಳಿಕೆಯೊಂದಿಗೆ ಸಂಘದ ಕುರಿತು ಆಂತರಿಕ ದೃಷ್ಟಿಕೋನವನ್ನು ನೀಡುತ್ತದೆ. ಧರ್ಮ, ಸ್ವ–ತ್ವ (ಸ್ವಯಂ), ಹಿಂದುತ್ವ ಮತ್ತು ಸನಾತನದಂತಹ ಸಂಕೀರ್ಣ ಪರಿಕಲ್ಪನೆಗಳ ಕುರಿತು ವಿವರಣಾತ್ಮಕ ವಿಶ್ಲೇಷಣೆ ಇದರಲ್ಲಿ ದೊರೆಯುತ್ತದೆ. ಉಪನಿಷತ್ತುಗಳಿಂದ ಹಿಡಿದು ಸಮಕಾಲೀನ ಶ್ರೇಷ್ಠರ ಜೀವನದವರೆಗಿನ ಉಲ್ಲೇಖಗಳೊಂದಿಗೆ, ಲೇಖಕರು ಭಾರತದ ಆತ್ಮವನ್ನು ಪುನಃ ಜಾಗೃತಗೊಳಿಸುವುದರ ಜೊತೆಗೆ 'ಸೆಕ್ಯುಲರಿಸಂ', 'ಲಿಬರಲಿಸಂ' ಮತ್ತು 'ಅಖಂಡ ಭಾರತ' ಪರಿಕಲ್ಪನೆಯಂತಹ ಸಮಕಾಲೀನ ವಿಷಯಗಳ ಬಗ್ಗೆ ಒಳನೋಟಗಳನ್ನು ಒದಗಿಸುತ್ತಾರೆ. ಡಾ. ಮನಮೋಹನ್ ವೈದ್ಯ ಅವರ ಸರಳ ಭಾಷೆ, ಉಪಾಖ್ಯಾನಗಳು, ಪಾಂಡಿತ್ಯ ಮತ್ತು ಭಾರತೀಯ ಸಮಾಜದೊಂದಿಗಿನ ಜೀವಂತ ಸಂಪರ್ಕವು ಓದುಗರನ್ನು ನಾವು ಯಾರು ಮತ್ತು ನಾವು ಯಾರಾಗಬೇಕೆಂದು ಬಯಸುತ್ತೇವೆ ಎಂಬ ಆಳವಾದ ಚಿಂತನೆಯಲ್ಲಿ ತೊಡಗಿಸುತ್ತದೆ.

**ಸಂಪಾದಕೀಯ ಸಹಕಾರ:** ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಮೇಘ ಪ್ರಮೋದ್, ದೀಕ್ಷಿತ್ ನಾಯರ್ ಮಂಡ್ಯ

# ಸಾಲುದ್ದದ ಸುದ್ದಿಗಳು

## ಚಂದ್ರಯಾನ-3 ಶ್ಲಾಘಿಸಿದ ನಾಸಾ



ಚಂದ್ರಯಾನ-3 ಮಿಷನ್‌ನಲ್ಲಿ ಭಾರತದ ಯಶಸ್ಸನ್ನು ಶ್ಲಾಘಿಸಿದ ನಾಸಾ ನಿರ್ವಾಹಕ ಬಿಲ್ ನೆಲ್ಸನ್ ಅವರು, ಭಾರತವು ಯಾವುದೇ ದೇಶ ಮಾಡದ ಕೆಲಸವನ್ನು ಮಾಡಿದೆ ಮತ್ತು ಈ ಸಾಧನೆಗಾಗಿ ಪ್ರತಿ ಪ್ರಶಂಸೆಗೆ ಅರ್ಹವಾಗಿದೆ. ನೀವು ಮೊದಲು ಚಂದ್ರನ ದಕ್ಷಿಣ ಧ್ರುವದ ಸುತ್ತ ಇಳಿದಿದ್ದೀರಿ. ನಾವು ಮುಂದಿನ ವರ್ಷ ಆ ಜಾಗದಲ್ಲಿ ವಾಣಿಜ್ಯ ಲ್ಯಾಂಡರ್ ಅನ್ನು ಇಳಿಸಲಿದ್ದೇವೆ, ಆದರೆ ಭಾರತವು ಇಲ್ಲಿ ಇಳಿದ ಮೊದಲನೆಯ ದೇಶ. ಇತರರು ಪ್ರಯತ್ನಿಸಿದ್ದಾರೆ ಮತ್ತು ವಿಫಲರಾಗಿದ್ದಾರೆ. ಆದರೆ ಭಾರತ ಯಶಸ್ವಿಯಾಗಿದೆ. ಈ ಸಾಧನೆಗಾಗಿ ನೀವು ಪ್ರತಿ ಶ್ಲಾಘನೆಗೆ ಅರ್ಹರು, ಇದು ಬಹಳ ಮಹತ್ವದ್ದಾಗಿದೆ ಎಂದು ಹೇಳಿದರು.

## ಸಿಂಧುದುರ್ಗದಲ್ಲಿ ಶಿವಾಜಿ ಪ್ರತಿಮೆ ಅನಾವರಣ



ನೌಕಾಪಡೆ ದಿನದ ಸಂಭ್ರಮಾಚರಣೆಯಲ್ಲಿ ಮಹಾರಾಷ್ಟ್ರದ ಸಿಂಧುದುರ್ಗ ಜಿಲ್ಲೆಯ ರಾಜ್‌ಕೋಟ್ ಕೋಟೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆಯನ್ನು ಪ್ರಧಾನಿ ನರೇಂದ್ರ ಮೋದಿ ಅನಾವರಣಗೊಳಿಸಿದರು. ಸಿಂಧುದುರ್ಗ ಕೋಟೆ ಸೇರಿದಂತೆ ಹಲವಾರು ಕರಾವಳಿ ಮತ್ತು ಸಮುದ್ರ ಕೋಟೆಗಳನ್ನು ನಿರ್ಮಿಸಿದ ಛತ್ರಪತಿ ಶಿವಾಜಿ ಮಹಾರಾಜರ ಶ್ರೀಮಂತ ಕಡಲ ಪರಂಪರೆಗೆ ಗೌರವ ಸಲ್ಲಿಸಲಾಯಿತು. ಜೊತೆಗೆ ನೌಕಾ ಪಡೆಯ ಶ್ರೇಣಿಯನ್ನು ಭಾರತೀಯರ ಪರಂಪರೆಯಂತೆ, ಸಂಸ್ಕೃತಿಯಂತೆ ಮರುನಾಮಕರಣ ಮಾಡಲಾಗುತ್ತದೆ. ನೌಕಾ ಪಡೆಯಲ್ಲಿ ಮಹಿಳಾ ಶಕ್ತಿಯನ್ನು ಹೆಚ್ಚಿಸಲಾಗುತ್ತದೆ. ಈ ನಿಟ್ಟಿನಲ್ಲಿ ನೌಕಾಪಡೆಯಲ್ಲಿ ದೇಶದ ಮೊದಲ ಮಹಿಳಾ ಕಮಾಂಡಿಂಗ್ ಅಧಿಕಾರಿಯನ್ನು ನೇಮಿಸಿರುವುದು ಗಮನಾರ್ಹ ಸಂಗತಿ.

## ಪಠ್ಯಪುಸ್ತಕದಲ್ಲಿ ರಾಮಾಯಣ, ಮಹಾಭಾರತ

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ರಚಿಸಿರುವ ಪಠ್ಯ ಪರಿಷ್ಕರಣಾ ಸಮಿತಿಯು ಪಠ್ಯಪುಸ್ತಕಗಳಲ್ಲಿ ಅಮೂಲಾಗ್ರ ಬದಲಾವಣೆ ತರಲು ಬಯಸಿದ್ದು, ರಾಮಾಯಣ ಹಾಗೂ ಮಹಾಭಾರತವನ್ನು ಶಾಲೆಗಳ ಇತಿಹಾಸ ಪಠ್ಯದಲ್ಲಿ ಅಳವಡಿಸಬೇಕು ಎಂದು ಶಿಫಾರಸು ಮಾಡಿದೆ. ಇತ್ತೀಚೆಗೆ ಪಠ್ಯಗಳಲ್ಲಿ ಇಂಡಿಯಾ ಹೆಸರನ್ನು ಭಾರತ ಎಂದು ಬದಲಿಸಲು ಇದೇ ಸಮಿತಿ ಶಿಫಾರಸು ಮಾಡಿತ್ತು. ಆದರೆ ಈವರೆಗೂ ಎನ್‌ಸಿಇಆರ್‌ಟಿ ಯಾವುದೇ ಅಂತಿಮ ನಿರ್ಣಯ ಕೈಗೊಂಡಿಲ್ಲ. ಇತಿಹಾಸದಲ್ಲಿ ಪ್ರಸ್ತುತ ಇರುವ 3 ಕಾಲಘಟ್ಟಗಳ ಜೊತೆಯಲ್ಲಿ ಮಹಾಕಾವ್ಯ ಮತ್ತು ಆಯುರ್ವೇದಗಳನ್ನು ಅಳವಡಿಸುವ ಚಿಂತನೆ ನಡೆದಿದೆ.

## ಅಪಘಾತ ಸಂತ್ರಸ್ತರಿಗೆ ನಗದುರಹಿತ ಚಿಕಿತ್ಸೆ

ನವದೆಹಲಿ: ದೇಶದಾದ್ಯಂತ ರಸ್ತೆ ಅಪಘಾತ ಸಂತ್ರಸ್ತರಿಗೆ ನಗದು ರಹಿತ ವೈದ್ಯಕೀಯ ಚಿಕಿತ್ಸೆ ಸೌಲಭ್ಯ ನೀಡಲು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಮುಂದಾಗಿದೆ. ಮುಂದಿನ ನಾಲ್ಕು ತಿಂಗಳಲ್ಲಿ ಈ ಯೋಜನೆ ಜಾರಿಗೆ ಬರಲಿದೆ. ರಸ್ತೆ ಅಪಘಾತದಿಂದ ಸಂಭವಿಸುವ ಸಾವಿನಲ್ಲಿ ಭಾರತ ವಿಶ್ವದಲ್ಲೇ ಅಗ್ರ ಸ್ಥಾನದಲ್ಲಿದೆ. ಮೋಟಾರು ವಾಹನ ಕಾಯಿದೆಗೆ ಇತ್ತೀಚೆಗೆ ತಿದ್ದುಪಡಿ ಮಾಡಲಾಗಿದ್ದು, ಇದರ ಅಡಿ ಅಪಘಾತ ಸಂತ್ರಸ್ತರಿಗೆ ಉಚಿತ ಮತ್ತು ನಗದು ರಹಿತ ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತದೆ. ಕೆಲ ರಾಜ್ಯಗಳು ಇದನ್ನು ಈಗಾಗಲೇ ಜಾರಿಗೆ ತಂದಿವೆ. ಆದರೆ ಈಗ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಹೆದ್ದಾರಿ ಸಚಿವಾಲಯ ದೇಶಾದ್ಯಂತ ಇದನ್ನು ಅನುಷ್ಠಾನಗೊಳಿಸಲಿದೆ.

## ಸಾವಯವ ಮಾರುಕಟ್ಟೆಗೆ ಭಾರತ ಪ್ರಮುಖ ಕೊಡುಗೆದಾರ

ಜಾಗತಿಕವಾಗಿ ಸಾವಯವ ಮತ್ತು ನೈಸರ್ಗಿಕ ಉತ್ಪನ್ನಗಳ ಮಾರುಕಟ್ಟೆಗೆ ಭಾರತವು ಪ್ರಮುಖ ಕೊಡುಗೆದಾರನಾಗಿ ಹೊರಹೊಮ್ಮಿದೆ ಮತ್ತು ಕಳೆದ ಮೂರು ವರ್ಷಗಳಲ್ಲಿ ಮಾರುಕಟ್ಟೆಯಲ್ಲಿ ಅದರ ಪಾಲು 17,853 ಕೋಟಿ ರೂಪಾಯಿಯಾಗಿದೆ ಎಂದು ಲೋಕಸಭೆಯಲ್ಲಿ ಲಿಖಿತ ಉತ್ತರದಲ್ಲಿ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್ ನೀಡಿದ್ದಾರೆ.

## ತ್ರಿಪುರಾ: 2023ರಲ್ಲಿ 431 ಬಾಂಗ್ಲಾದೇಶಿ, ರೋಹಿಂಗ್ಯಾಗಳನ್ನು ಬಿಎಸ್‌ಎಫ್ ಬಂಧಿಸಿದೆ

2023 ರಲ್ಲಿ ಬಿಎಸ್‌ಎಫ್ ಅಪಾರ ಮೌಲ್ಯದ ಮೌಲ್ಯದ ಮಾದಕ ದ್ರವ್ಯಗಳನ್ನು, 64 ಕೋಟಿ ರೂಪಾಯಿ ಮೌಲ್ಯದ ಕಳ್ಳಸಾಗಣೆಯಾದ ವಸ್ತುಗಳನ್ನು ವಶಪಡಿಸಿಕೊಂಡಿದೆ. 431 ಬಾಂಗ್ಲಾದೇಶಿ, ರೋಹಿಂಗ್ಯಾ ಮತ್ತು 285 ಭಾರತೀಯರನ್ನು ತ್ರಿಪುರಾದಲ್ಲಿ ಬಂಧಿಸಿದೆ. 8,73,000 ಗಾಂಜಾ ಸಸಿಗಳ ಜೊತೆಗೆ ಸುಮಾರು 253.20 ಎಕರೆ ಪ್ರದೇಶವನ್ನು ಬಿಎಸ್‌ಎಫ್ ಪಡೆಗಳು ನಾಶಪಡಿಸಿವೆ.

## ಲೋಕಸಭಾ ಕಲಾಪಕ್ಕೆ ಕನ್ನಡದ ಕಂಪು



ಲೋಕಸಭೆಯ ಪ್ರತಿಯೊಂದು ಕಾರ್ಯಕಲಾಪವು ಕನ್ನಡ ಸೇರಿದಂತೆ 21 ಭಾಷೆಗಳಿಗೆ ಭಾಷಾಂತರಗೊಳ್ಳಲಿದೆ. ಸಂಸತ್ತಿನ ಪೂರ್ಣ ಕಾರ್ಯಕಲಾಪಗಳನ್ನು ಭಾರತೀಯ ಭಾಷೆಗಳಲ್ಲಿ ಭಾಷಾಂತರ ಮಾಡಿಸುವ ಸಲುವಾಗಿ ಹೊಸ ಸಂಸತ್ ಭವನದಲ್ಲಿ ವ್ಯವಸ್ಥೆ ಮಾಡಲಾಗಿದ್ದು ಅದಕ್ಕಾಗಿ ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರ್ಪಡೆಯಾಗಿರುವ ಎಲ್ಲ ಭಾಷೆಗಳಲ್ಲೂ ತಲಾ ಐದು ಕನ್ಸಲ್ಟಂಟ್ ಹುದ್ದೆಗಳನ್ನು ಸೃಜಿಸಲಾಗಿದೆ. ಕೊಂಕಣಿ, ಮೈಥಿಲಿ, ಸಂಸ್ಕೃತ ಸೇರಿದಂತೆ ಹಲವು ಭಾಷೆಗಳ 64 ಭಾಷಾಂತರಕಾರರಿಗೆ ಈ ವರ್ಷದ ಜೂನ್-ಜುಲೈ ತಿಂಗಳಲ್ಲಿ ತರಬೇತಿ ನೀಡಲಾಗಿದೆ. ಈ ಪೈಕಿ, ಕನ್ನಡ, ತಮಿಳು, ತೆಲುಗು, ಗುಜರಾತ್ ಸೇರಿದಂತೆ 10 ಭಾಷೆಗಳಿಗೆ ಕಾರ್ಯಕಲಾಪವು ಭಾಷಾಂತರಗೊಳ್ಳಲಿದೆ. ಈವರೆಗೂ ಲೋಕಸಭೆಯ ಕಾರ್ಯಕಲಾಪ ಪಟ್ಟಿಯು ಇಂಗ್ಲಿಷ್ ಅಥವಾ ಹಿಂದಿಯಲ್ಲಿ ಮುದ್ರಣಗೊಳ್ಳುತ್ತಿತ್ತು. ಇದೀಗ, ಕನ್ನಡದಲ್ಲಿ ಕಾರ್ಯಕಲಾಪ ಪಟ್ಟಿ ಮುದ್ರಣಗೊಳ್ಳುತ್ತದೆ. ಹೊಸ ಭಾಷಾಂತರ ವ್ಯವಸ್ಥೆಯಲ್ಲಿ ಇತರ ಭಾಷೆಗಳಲ್ಲಿ ನಡೆಯುವ ಸಂಸತ್ತಿನ ಕಲಾಪದ ಸಂಪೂರ್ಣ ಚರ್ಚೆಗಳನ್ನು ಕನ್ನಡದಲ್ಲಿಯೂ ಕೇಳಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ

# ಸುಮಾರು 2 ಲಕ್ಷದಷ್ಟು ಗಿಡ ನೆಟ್ಟ ಪರಿಸರ ಪ್ರೇಮಿ ಕೊಡಗಿನ ರಾಜೇಂದ್ರ ಸಿಂಗ್

ಪ್ರೇರಣಾ

ಪರಿಸರ ದಿನೇ ದಿನೇ ಹಾಳಾಗುತ್ತಿದ್ದು, ಮಾಲಿನ್ಯ ಹೆಚ್ಚಾಗುತ್ತಿದ್ದು, ಇದು ಎಲ್ಲ ಜೀವಿಗಳಿಗೂ ಆತಂಕದ ಪರಿಸ್ಥಿತಿಯನ್ನು ತಂದಿದೆ. ನಮ್ಮ ಪರಿಸರವನ್ನು ಸಂರಕ್ಷಿಸದೇ ಹೋದರೆ ನಾವು ಮಾತ್ರವಲ್ಲ ಮುಂದಿನ ಪೀಳಿಗೆಯೂ ಸಂಕಷ್ಟದಲ್ಲಿ ಸಿಲುಕಿಕೊಳ್ಳುತ್ತದೆ. ಪರಿಸರ ಹಾನಿಗೆ ಕಾರಣ ಮನುಕುಲದ ಅನೇಕ ಚಟುವಟಿಕೆಗಳು. ಈ ಚಟುವಟಿಕೆಗಳಲ್ಲಿ ನಾವೆಲ್ಲರೂ ಭಾಗಿಯೂ ಹೌದು. ಆದರೆ, ಪರಿಸರ ಸಂರಕ್ಷಣೆಗೆ ನಮ್ಮಲ್ಲಿ ಎಷ್ಟು ಜನ ಮುಂದಾಗಿ ಕೆಲಸ ಮಾಡುತಿದ್ದೇವೆ ಎಂಬುದು ಪ್ರಮುಖವಾದ ಅವಲೋಕನಾತ್ಮಕ ಪ್ರಶ್ನೆ.

ಇಂತಹ ಪ್ರಶ್ನೆಗಳಿಗೆ ಪ್ರತಿಯೊಬ್ಬ ನಾಗರಿಕನೂ ಉತ್ತರಿಸುವ ಬಾಧ್ಯತೆಯನ್ನು ಹೊರಬೇಕಾಗಿದ್ದರೂ, ನಾಡಿನಾದ್ಯಂತ ಕೆಲವಾದರೂ ಆದರ್ಶದ ನಿದರ್ಶನಗಳು ಆಗಾಗ ಕೇಳಿ ಬರುತ್ತವೆ. ಅಂತಹ ನಿದರ್ಶನಗಳಲ್ಲಿ ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕಿನ ರಾಜೇಂದ್ರ ಸಿಂಗ್‌ರವರು ಒಬ್ಬರು.

**1.80 ಲಕ್ಷ ಗಿಡಗಳ ಪೋಷಣೆ:** ಹಲವು ವರ್ಷಗಳಿಂದ ನಿರಂತರವಾಗಿ ಗಿಡಗಳನ್ನು ನೆಟ್ಟು ಪೋಷಿಸುತ್ತಾ ಬಂದಿರುವ ರಾಜೇಂದ್ರ ಸಿಂಗ್ ಅವರು ಇದುವರೆಗೆ ತಮ್ಮ ಜಿಲ್ಲೆಯಲ್ಲಿ ಸುಮಾರು 1.80 ಲಕ್ಷದಷ್ಟು ಸಸಿಗಳನ್ನು ನೆಟ್ಟಿದ್ದಾರೆ. ಈ ಗಿಡಗಳಿಗೆ ವಿಶೇಷವಾಗಿ ಬೇಸಿಗೆಯಲ್ಲಿ ತಪ್ಪದೆ ನೀರನ್ನು ಹಾಕಿ ಪೋಷಿಸಿದ್ದಾರೆ. ಗಿಡಗಳನ್ನು ಬೆಳೆಸುವ ಪ್ರವೃತ್ತಿಯನ್ನು ಯುವಜನತೆಯಲ್ಲಿ ಹೆಚ್ಚಿಸುವ ದೃಷ್ಟಿಯಿಂದ ಮತ್ತು ಪರಿಸರ ಸಂರಕ್ಷಣೆಯ ತಮ್ಮ ಕೆಲಸಕ್ಕೂ ವೇಗ ಸಿಗುವುದರಿಂದ ರಾಜೇಂದ್ರಸಿಂಗ್ ರವರು ಶಾಲಾ - ಕಾಲೇಜು ವಿದ್ಯಾರ್ಥಿಗಳಿಗೆ ಗಿಡಗಳನ್ನು ನೆಟ್ಟು ಬೆಳೆಸುವ ಬಗ್ಗೆ ಹಾಗೂ ವಿವಿಧ ಸ್ಪರ್ಧೆಗಳನ್ನು ನಡೆಸಿ ಬಹುಮಾನ ನೀಡಿ ಯುವಕ ಯುವತಿಯರನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದ್ದಾರೆ.

ರಾಜಸ್ಥಾನ ಮೂಲದ ರಾಜೇಂದ್ರ ಸಿಂಗ್ ರವರು 23 ವರ್ಷಗಳಿಂದ ಕೊಡಗಿನಲ್ಲೆ ನೆಲೆಸಿದ್ದಾರೆ. ಚಿಕ್ಕಂದಿನಿಂದ ಇವರಿಗೆ ಪರಿಸರದ ಮೇಲೆ ಅಪಾರ ಕಾಳಜಿ. ಹೀಗಾಗಿ ಇವರು ಶಾಲಾ, ಕಾಲೇಜು, ಆಸ್ಪತ್ರೆ, ಸರ್ಕಾರಿ ಕಛೇರಿ, ಪ್ರವಾಸಿ ತಾಣಗಳು, ರಸ್ತೆ ಬದಿ, ಮುಂತಾದ ಕಡೆಗಳಲ್ಲಿ ಹಾಗೂ ಅರಣ್ಯ ಪ್ರದೇಶಗಳಲ್ಲಿ ಪ್ರಾಣಿ ಪಕ್ಷಿಗಳಿಗೆ ಉಪಯುಕ್ತವಾಗುವ ಗಿಡಗಳನ್ನು ನೆಟ್ಟು ಪೋಷಿಸುತ್ತಾ ಬಂದಿದ್ದಾರೆ. ಗಿಡ ನೆಡುವ ಕಾಯಕದ ಜೊತೆಗೆ ಆರೋಗ್ಯ ಶಿಬಿರವನ್ನೂ ನಡೆಸುತ್ತಾರೆ. ಶುದ್ಧ ನೀರಿನ ಘಟಕವನ್ನು ಪ್ರಾರಂಭಿಸಿದ್ದಾರೆ. ಪರಿಸರದ ಮೇಲಿನ ಇವರ ಕಾಳಜಿಯ ಜೊತೆಗೆ ಈ ರೀತಿ ಜನ ಸಾಮಾನ್ಯರಿಗೆ ಉಪಯೋಗವಾಗುವಂತೆ ಕೆಲಸಗಳನ್ನು ಮಾಡುತ್ತಿರುವುದು ತಾವು ಮಾಡುತ್ತಿರುವ ಕೆಲಸದೊಂದಿಗೆ ಸಮಾಜದ ಕೆಲಸದಲ್ಲೂ ತೊಡಗಿಕೊಳ್ಳಲು ಯುವಕರಿಗೆ ಪ್ರೇರಣೆ ನೀಡುವಂತದ್ದಾಗಿದೆ.

**ಪರಿಸರ ಪಂಚಾಮೃತ ಯಾತ್ರೆಗೆ ಚಿಂತನೆ:** ಇವರ ಪರಿಸರ ಸಂರಕ್ಷಣೆಯ ಮುಂದಿನ ಯೋಜನೆಯಾಗಿ 'ಪರಿಸರ ಪಂಚಾಮೃತ' ಯಾತ್ರೆ ನಡೆಸುವುದಾಗಿ ಚಿಂತನೆ ನಡೆಸುತ್ತಿದ್ದಾರೆ. ಈ ಯಾತ್ರೆಯ ಮೂಲಕ ಕೊಡಗಿನ ಪ್ರತಿಯೊಂದು ಗ್ರಾಮಗಳಲ್ಲಿ ಆಲದಮರ, ಅರಳಿಮರ, ಕಹಿ ಬೇವು, ಬಿಲ್ವ ಪತ್ರೆ, ಹತ್ತಿ ಮರ ಇವುಗಳನ್ನು



ನೆಡುವುದರ ಸಂಕಲ್ಪವನ್ನು ಹೊಂದಿದ್ದಾರೆ. ಮುಂದಿನ ವರ್ಷ ಜೂನ್ 5, ಪರಿಸರ ದಿನದಂದು ಈ ಯಾತ್ರೆಗೆ ಪ್ರಾರಂಭಿಸುವ ನಿರೀಕ್ಷೆಯಲ್ಲಿದ್ದಾರೆ. ಈ ಪರ್ಯಾವರಣ ಪಂಚಾಮೃತ ಯಾತ್ರೆಗೆ ಎಲ್ಲರ ಸಹಕಾರದ ಅಗತ್ಯವಿದೆ ಎಂದು ಮನವಿ ಮಾಡಿದ್ದಾರೆ.

ರಾಜೇಂದ್ರ ಸಿಂಗ್‌ರವರ ಪರಿಸರ ಕಾಳಜಿ, ಸಾಮಾಜಿಕ ಬದ್ಧತೆ, ಜನರಲ್ಲಿ ಜಾಗೃತಿ ಮೂಡಿಸುವ ಸಂಕಲ್ಪ, ನಾವು ನಮಗೆ ಮಾತ್ರವಲ್ಲದೆ ನಮ್ಮ ಸಮಾಜಕ್ಕೂ ಹಾಗೂ ಮುಂದಿನ ಪೀಳಿಗೆಗೂ ಸಹಕಾರಿಯಾಗಿರಬೇಕೆಂಬ ಚಿಂತನೆ ಸರ್ವರಿಗೂ ಪ್ರೇರಣೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th DECEMBER 2023

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 15-12-2023



# ಹಿಂದೂಯಿಸಂ ಬದಲು ಹಿಂದುತ್ವ ಶಬ್ದ ಬಳಕೆಗೆ ವರ್ಲ್ಡ್ ಹಿಂದೂ ಕಾಂಗ್ರೆಸ್ ನಿರ್ಣಯ

ಬ್ಯಾಂಕಾಕ್: ವಿಶ್ವ ಹಿಂದೂ ಸಮ್ಮೇಳನ (ವರ್ಲ್ಡ್ ಹಿಂದೂ ಕಾಂಗ್ರೆಸ್), 2023 ಥೈಲ್ಯಾಂಡ್‌ನ ಬ್ಯಾಂಕಾಕ್‌ನಲ್ಲಿ ನವೆಂಬರ್ 24 ರಿಂದ 26ರವರೆಗೆ ನಡೆಯಿತು. ಈ ಸಮ್ಮೇಳನದಲ್ಲಿ ಹಿಂದುತ್ವ, ಹಿಂದು ಮತ್ತು ಸನಾತನ ಧರ್ಮ ಕುರಿತು ನಿರ್ಣಯವನ್ನು ಹೊರಡಿಸಲಾಗಿದೆ.

ನಿರ್ಣಯದಲ್ಲಿ 'ಹಿಂದೂ ಧರ್ಮ' ಎಂಬ ಪದದಲ್ಲಿ ಹಿಂದೂ ಎನ್ನುವುದಕ್ಕೆ ಯಾವುದೇ ಮಿತಿಯಿಲ್ಲ. ಅದು ಸನಾತನ ಅಥವಾ ಶಾಶ್ವತವಾದದ್ದು ಎನ್ನುವುದನ್ನು ಸೂಚಿಸುತ್ತದೆ. ಧರ್ಮ ಎಂದರೆ 'ಯಾವುದು ಉಳಿಯುತ್ತದೆ' ಎಂಬ ಅರ್ಥವನ್ನು ಸೂಚಿಸುತ್ತದೆ. ಹಾಗಾಗಿ ಹಿಂದೂ ಧರ್ಮವೆನ್ನುವುದು ಜೀವ – ನಿರ್ಜೀವವನ್ನೊಳಗೊಂಡ ಪ್ರಕೃತಿಯ ಎಲ್ಲವನ್ನೂ ಎತ್ತಿಹಿಡಿಯುತ್ತದೆ.

ಹಿಂದೂಯಿಸಂ ಎನ್ನುವುದು ಸಂಪೂರ್ಣವಾಗಿ ಭಿನ್ನವಾದದ್ದು. 'ಇಸಂ' ಪದ ದಬ್ಬಾಳಿಕೆ ಮತ್ತು ತಾರತಮ್ಯದ ನಡವಳಿಕೆ ಅಥವಾ ನಂಬಿಕೆಯೆಂದು ವ್ಯಾಖ್ಯಾನಿಸಲಾಗಿದೆ. 19ನೇ ಶತಮಾನದ ಮಧ್ಯಭಾಗದಲ್ಲಿ ಅಮೇರಿಕಾದಲ್ಲಿ 'ದಿ ಇಸಂಸ್' ಎಂಬ ನುಡಿಗಟ್ಟು ತೀವ್ರಗಾಮಿ ಸಾಮಾಜಿಕ ಸುಧಾರಣಾ ಚಳವಳಿಗಳು, ಮುಖ್ಯಭೂಮಿಕೆಯಲ್ಲಿರದ ಆಧ್ಯಾತ್ಮಿಕ, ಮತೀಯ ಚಳವಳಿಗಳನ್ನು ಉದ್ದೇಶಿಸಿ ಅವಹೇಳನಕಾರಿ ರೀತಿಯಲ್ಲಿ ಬಳಕೆಯಾಯಿತು. 'ಹಿಂದೂಯಿಸಂ' ಅನ್ನು ಈ ಹಿನ್ನಲೆಯಲ್ಲಿ ಅರ್ಥೈಸಬೇಕಿದೆ.

ಖ್ಯಾತ ಶಬ್ದಕೋಶವೆಂದು ಗುರುತಿಸಿಕೊಂಡಿರುವ ಸರ್ ಮನಿಯರ್ – ಮನಿಯರ್ ವಿಲಿಯಮ್ಸ್ ಅವರ ಕೈಪಿಡಿ 'ಹಿಂದೂಯಿಸಂ' ಮೂಲಕ ಈ ಪದ ಮೊದಲು ಪರಿಚಯಿಸಲ್ಪಟ್ಟಿತು. ಇದು ಸೊಸೈಟಿ ಫಾರ್ ಪ್ರೊಮೋಟಿಂಗ್ ಕ್ರಿಶ್ಚಿಯನ್ ನಾಲೆಡ್ಜ್‌ನಿಂದ 1877ರಲ್ಲಿ ಪ್ರಕಟಣೆಗೊಂಡಿತು. ಈ ಅಪ್ರಾಮಾಣಿಕ ಪರಿಭಾಷೆ 150 ವರ್ಷಗಳಿಂದ ಹಿಂದೂ ವಿರೋಧಿ ಕಥನಗಳಿಗೆ ಬೀಜಾರ್ಪಣೆ ಮಾಡಿದೆ.

ನಮ್ಮ ಅನೇಕ ಹಿರಿಯರು ಹಿಂದೂಯಿಸಂನ ಬದಲು ಹಿಂದುತ್ವ ಶಬ್ದಕ್ಕೆ ಆದ್ಯತೆ ನೀಡಿದರು. ಹಿಂದುತ್ವ ಎನ್ನುವುದು ಸಂಕೀರ್ಣವಾದ ಪದವಲ್ಲ. ಅದು ಹಿಂದೂತನ ಎಂದಾಗಿದೆ. ಇದಕ್ಕೆ ಪರ್ಯಾಯವಾಗಿ ಸನಾತನ ಧರ್ಮವೆಂದು ಬಳಸುತ್ತಾರೆ. ಅದುವೇ ಸಂಕ್ಷೇಪಣಗೊಂಡು ಶಾಶ್ವತ ಸ್ವಭಾವವನ್ನು ಸೂಚಿಸುವ ಸನಾತನ ಎಂದಾಗಿದೆ.

ಹಾಗಿದ್ದರೂ ಸಮಾಜದ ಅನೇಕ ಸಾರ್ವಜನಿಕ ವೇದಿಕೆಗಳಲ್ಲಿ ಅನೇಕ ಶಿಕ್ಷಣ ತಜ್ಞರು ಮತ್ತು ಚಿಂತಕರು ನಿರಂತರವಾಗಿ ಅತ್ಯಂತ



ಋಣಾತ್ಮಕವಾಗಿ ಹಿಂದುತ್ವವನ್ನು ಹಿಂದೂ ಧರ್ಮದ ವಿರೋಧಿ ಪದವಾಗಿ ಪ್ರಸ್ತುತ ಪಡಿಸುತ್ತಾರೆ. ಕೆಲವರಿಗೆ ಹೀಗೆ ಮಾಡುವುದಕ್ಕೆ ಅವರ ಅಜ್ಞಾನವೇ ಕಾರಣವಾಗಿದ್ದರೆ ಇನ್ನೂ ಕೆಲವರಿಗೆ ಹಿಂದೂ ಧರ್ಮದ ಕುರಿತಾದ ತಮ್ಮ ದ್ವೇಷ ಮತ್ತು ಪಕ್ಷಪಾತವೇ ಕಾರಣವಾಗಿದೆ. ಅನೇಕ ರಾಜಕೀಯ ನಾಯಕರುಗಳು ಕೂಡ ತಮ್ಮ ರಾಜಕೀಯ ಅಜೆಂಡಾಗಳು ಮತ್ತು ವೈಯಕ್ತಿಕ ಪೂರ್ವಗ್ರಹ ಪೀಡಿತರಾಗಿ ಸನಾತನ ಧರ್ಮವನ್ನು, ಸನಾತನವನ್ನು ಟೀಕಿಸುವ ತಂಡದ ಜೊತೆಗೆ ಸೇರಿಕೊಂಡಿದ್ದಾರೆ ಮತ್ತು ನಿರಂತರವಾಗಿ ಕಟುಟೀಕೆಯನ್ನು ಮಾಡುತ್ತಿದ್ದಾರೆ.

ಹೀಗೆ ದುರುದ್ದೇಶಪೂರಕವಾಗಿ ಹಿಂದುತ್ವ ಅಥವಾ ಸನಾತನ ಧರ್ಮವನ್ನು ಟೀಕಿಸುವವರ ವರ್ತನೆಯನ್ನು ವಿಶ್ವ ಹಿಂದೂ ಕಾಂಗ್ರೆಸ್ ಖಂಡಿಸುತ್ತದೆ. ವಿಶ್ವ ವ್ಯಾಪಿಯಾಗಿರುವ ಹಿಂದುಗಳಿಗೆ ಸಾಂಘಿಕ ಜಾಗತಿಕ ಪ್ರಯತ್ನಗಳ ಮೂಲಕ ಹಿಂದುತ್ವವನ್ನು ಅಭಿವ್ಯಕ್ತಿಸುವುದಕ್ಕೆ ತಿಳಿಸುತ್ತದೆ. ಆ ಮೂಲಕ ಹಿಂದೂ ವಿರೋಧಿ ದಾಳಿಗಳು, ಮತಾಂಧತೆಗಳಲ್ಲಿ ಒಳಗೊಂಡಿರುವವರು ವಿಜಯಶಾಲಿಗಳಾಗುವುದರಿಂದ ತಪ್ಪಿಸಬೇಕಾಗಿದೆ ಎಂದು ತಿಳಿಸಿದೆ. **(ಇಸಂ ಎನ್ನುವುದು ಒಂದು ಚೌಕಟ್ಟಿನೊಳಗೆ ಸೀಮಿತಗೊಳಿಸುವ ವಿಚಾರ. ಈ ಪದ ಬಳಕೆ ಹಿಂದು ಪದದ ಜತೆಗೆ ಬಳಸುವುದು ಹಿಂದು ಶಬ್ದದ ವಿಶಾಲವಾದ ಅರ್ಥ ಮತ್ತು ವ್ಯಾಪ್ತಿಗೆ ಸರಿಹೊಂದುವುದಿಲ್ಲ. ಹಾಗಾಗಿ ಹಿಂದೂಯಿಸಂ ಬದಲು ಹಿಂದುತ್ವ ಶಬ್ದ ಬಳಕೆಯೇ ಸೂಕ್ತ.)**

*1ನೇ ಪುಟದಿಂದ...*

## ಸಂವಿಧಾನಾತ್ಮಕ ಹೋರಾಟದ ಮೈಲಿಗಲ್ಲುಗಳು...

2018 ಸೆಪ್ಟೆಂಬರ್ 27 ಅಲಹಾಬಾದ್ ಕೋರ್ಟ್ ನೀಡಿದ್ದ ತೀರ್ಪು ಕುರಿತು ವಿಮರ್ಶಿಸಲು ಮೂವರು ನ್ಯಾಯಾಧೀಶರ ಪೀಠವನ್ನು ಸುಪ್ರೀಂ ರಚಿಸಿತು. (29.10.2018) ಐದು ನ್ಯಾಯಮೂರ್ತಿಗಳ ನಿಯುಕ್ತಿಯನ್ನು ಅದು ಒಪ್ಪಲಿಲ್ಲ. ಜನವರಿ 25, 2019 ರಂದು ರಾಮಜನ್ಮಭೂಮಿ ಕುರಿತಾದ ಎಲ್ಲಾ ಪ್ರಕರಣಗಳ ವಿಚಾರಣೆಗೆ ಮುಖ್ಯನ್ಯಾಯಮೂರ್ತಿ ರಂಜನ್ ಗೊಗಾಯ್, ಜಸ್ಟಿಸ್‌ರಾದ ಎಸ್.ವಿ. ಬೋಜ್ಡೆ, ಡಿ.ವೈ. ಚಂದ್ರಚೂಡ್, ಅಶೋಕ್ ಭೂಷಣ್, ಎಸ್. ಅಬ್ದುಲ್ ನಜೀರ್‌ರವರ ಪಂಚಪೀಠ ಘೋಷಣೆಯಾಯಿತು. 2019ರ ಅಗಸ್ಟ್ 6 ರಿಂದ 40 ದಿನಗಳ ಕಾಲ ಪ್ರತಿನಿತ್ಯ ವಿಚಾರಣೆ ಆರಂಭಗೊಂಡಿತು.

**9 ನವೆಂಬರ್ 2019 ಐತಿಹಾಸಿಕ ತೀರ್ಪು:** ಸರ್ವೋಚ್ಚ ನ್ಯಾಯಾಲಯದ ಪಂಚ ಸದಸ್ಯ ಪೀಠವು ಒಕ್ಕೊರಲಿನಿಂದ ರಾಮಲಲ್ಲಾಗೆ ವಿವಾದಿತ 2.77 ಎಕರೆ ಜಾಗ ಸಲ್ಲಬೇಕು ಎಂದಿತು. ಸುನ್ನಿ ವಕ್ಫ್ ಮಂಡಳಿಗೆ ಪರ್ಯಾಯವಾಗಿ 5 ಎಕರೆ ಜಮೀನು ನೀಡಬೇಕು. ನಿರ್ಮೋಹಿ ಆಖಾಡ ಸಲ್ಲಿಸಿದ್ದ ಅರ್ಜಿಯನ್ನೂ ಸುಪ್ರೀಂಕೋರ್ಟ್ ವಜಾಮಾಡಿತು. ಕೇಂದ್ರ ಸರ್ಕಾರ ಮಂದಿರ ನಿರ್ಮಾಣಕ್ಕಾಗಿ 3 ತಿಂಗಳೊಳಗೆ ಒಂದು ಟ್ರಸ್ಟ್ ನಿರ್ಮಿಸಬೇಕು. ನಿರ್ಮೋಹಿ ಆಖಾಡದ ಪ್ರತಿನಿಧಿಗೂ ಅವಕಾಶ ಕೊಡಬೇಕು ಎಂದಿತು.

**ತೀರ್ಪಿನಲ್ಲಿನ ಷರತ್ತುಗಳು:** ವಿವಾದಿತ ಜಾಗವನ್ನು ಕೇಂದ್ರಸರ್ಕಾರಕ್ಕೆ ಒಪ್ಪಿಸಬೇಕು. ಕೇಂದ್ರಸರ್ಕಾರ 3 ತಿಂಗಳ ಒಳಗೆ ಟ್ರಸ್ಟ್ ರಚಿಸಿ, ನಂತರ ಟ್ರಸ್ಟ್‌ಗೆ ಹಸ್ತಾಂತರಿಸಬೇಕು. ಟ್ರಸ್ಟ್ ಮೇಲುಸ್ತುವಾರಿಯಲ್ಲೇ ಮಂದಿರ ನಿರ್ಮಾಣವಾಗಬೇಕು. ಇದರಲ್ಲಿ ಬೇರೆ ಯಾರೊಬ್ಬರೂ ತಲೆ ಹಾಕುವಂತಿಲ್ಲ. ಜಾಗದ ಹಕ್ಕುದಾರಿಕೆ ಅರ್ಜಿ ಹಾಕಿದ್ದ ಸುನ್ನಿಬೋರ್ಡ್‌ಗೆ 5 ಎಕರೆ ಪರ್ಯಾಯ ಜಾಗ ನೀಡಬೇಕು. ಮಸೀದಿ ಅಡಿಪಾಯದ ಕೆಳಗೆ ವಿಶಾಲರಚನೆ ಇತ್ತು. ಅದು ಇಸ್ಲಾಂ ರಚನೆ ಆಗಿರಲಿಲ್ಲ. ಆ ಜಾಗಕ್ಕೂ ರಾಮನೇ ವಾರಸುದಾರ. 1992ರಲ್ಲಿ ಮಸೀದಿ ಒಡೆದದ್ದು ಅಪರಾಧ. 2010ರ ತೀರ್ಪಿನಲ್ಲಿ 2.77 ಎಕರೆ ಜಮೀನನ್ನು ಹಂಚಿದ್ದೂ ಸರಿಯಲ್ಲ. ಹಿಂದುಗಳ ಭಕ್ತಿಭಾವವನ್ನು ಯಾವ ನ್ಯಾಯಾಲಯವೂ ಅಲಕ್ಷಿಸಲಸಾಧ್ಯ ಎಂದು ಸರ್ವೋಚ್ಚ ನ್ಯಾಯಾಲಯ ತಿಳಿಸಿದೆ. ಆ ಮೂಲಕ ರಾಮನಿಗೆ ದೊರೆತ ಗೆಲುವು ಐತಿಹಾಸಿಕವೂ, ಸಾಂವಿಧಾನಿಕವೂ ಹೌದು.

# ಅಸ್ಪೃಶ್ಯತೆ ಮತ್ತು ಮೇಲು-ಕೀಳಿನ ಆಚರಣೆ ಧರ್ಮವಲ್ಲ, ಅಧರ್ಮ: ದತ್ತಾತ್ರೇಯ ಹೊಸಬಾಳೆ

ಬೆಂಗಳೂರು: ನಮ್ಮ ಶ್ರೇಷ್ಠ ಗ್ರಂಥಗಳಲ್ಲಿ ಹೇಳದಿದ್ದರೂ ನಡವಳಿಕೆಯಿಂದ ಕೆಲವರನ್ನು ಶ್ರೇಷ್ಠ ಮತ್ತು ಕನಿಷ್ಠವೆಂದು ಕಂಡಿರುವ ಅಮಾನುಷ ನಡೆ ನಮ್ಮ ಸಮಾಜದ ದೌರ್ಭಾಗ್ಯ. ಭಾರತದಲ್ಲಿದ್ದ ವರ್ಣ ವ್ಯವಸ್ಥೆಯನ್ನು ಜಾತಿ ವ್ಯವಸ್ಥೆಯೆಂದು ತಪ್ಪಾಗಿ ಅರ್ಥೈಸಲಾಗಿದೆ. ಜಾತಿಯಾಧಾರಿತವಾಗಿ ಮುನ್ನಡೆದಿದ್ದು ಅಸಮಾನತೆಗೆ ಕಾರಣವಾಗಿದೆ. ಇದರಿಂದಾಗಿ ಮೇಲು-ಕೀಳಿನ ಆಚರಣೆಯೇ ಹಿಂದೂ ಧರ್ಮವೆಂದು ಅವಹೇಳನ, ಅಪಪ್ರಚಾರ ಮಾಡಲಾಗುತ್ತಿದೆ' ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದರು.

ದಿ ಮಿಥಿಕ್ ಸೊಸೈಟಿಯ ವತಿಯಿಂದ ಆಯೋಜಿಸಲಾಗಿದ್ದ ನೂರ್ ಅಹಮದ್ ಖಾನ್ ದತ್ತಿ ಉಪನ್ಯಾಸದಲ್ಲಿ 'ಶ್ರೀ ಗುರೂಜಿ ಗೋಳ್ವಾಲ್ಕರ್ ಮತ್ತು ಹಿಂದೂ ಸಮಾಜದಲ್ಲಿ ಸಾಮಾಜಿಕ ಸಾಮರಸ್ಯ' ವಿಷಯದ ಕುರಿತು ಅವರು ಮಾತನಾಡಿದರು.

> **ಅಸ್ಪೃಶ್ಯತೆ ಅಮಾನವೀಯ ಆಚರಣೆ. ಜಾತಿ ಮತ್ತು ಅಸ್ಪೃಶ್ಯತೆಗೆ ಧಾರ್ಮಿಕ ಆಚರಣೆ ಸೇರಿಕೊಂಡಿದ್ದರಿಂದ ಕೆಲವರು ಇದನ್ನೇ ಹಿಂದೂ ಧರ್ಮ ಅಂದುಕೊಂಡರು. ಹಿಂದೂ ಧರ್ಮ ವಿರೋಧಿಸುವವರು ಇದನ್ನೇ ತರ್ಕಕ್ಕೆ ಬಳಸಿಕೊಂಡರು. ಎಲ್ಲರಲ್ಲಿಯೂ ಭಗವಂತ ಇದ್ದಾನೆ ಎಂದು ಪ್ರಾಚೀನ ಕಾಲದಿಂದ ನಾವು ನಂಬಿದ್ದೇವೆ. ಇಷ್ಟಾಗಿಯೂ ನಮ್ಮ ಸಮಾಜ ಏಕೆ ಅಸ್ಪೃಶ್ಯತೆ ಆಚರಣೆ ಮಾಡಿತು ಎನ್ನುವುದು ವಿಶ್ಲೇಷಣೆಗೆ ಮೀರಿದ್ದಾಗಿದೆ' – ದತ್ತಾತ್ರೇಯ ಹೊಸಬಾಳೆ**

ಶ್ರೇಷ್ಠ ಜೀವನವನ್ನು ಜಗತ್ತಿಗೆ ಸಾರಿದ ನಾವು, ನಡವಳಿಕೆಯಲ್ಲಿ ಎಲ್ಲಿ ಎಡವಿದೆವು ಎನ್ನುವುದರ ಕುರಿತು ಚಿಂತನೆ ಮಾಡಬೇಕಿದೆ. ಮೇಲು-ಕೀಳಿನ ಆಚರಣೆ ವೇದದ ನಿರ್ದೇಶನಕ್ಕೆ ವಿರೋಧವಾದದ್ದಾಗಿದೆ. ವಾಸ್ತವವಾಗಿ ಈ ಆಚರಣೆ ಅಧರ್ಮ. ಋಗ್ವೇದದಲ್ಲಿ ಹುಟ್ಟಿನಿಂದ ಯಾರೂ ಮೇಲು – ಕೀಳು ಎಂದಿಲ್ಲ. ಹಾಗಾಗಿ ಗುರೂಜಿ ಗೋಳ್ವಾಲ್ಕರ್ ಅವರು ಸಮಗ್ರ ಹಿಂದೂ ಸಮಾಜ ಕೆಲ ನಡುವಳಿಕೆಯನ್ನು ತಿದ್ದಿಕೊಂಡು ನಡೆಯಬೇಕು. ಏಕೆಂದರೆ ಹಿಂದೂ ಸಮಾಜದಲ್ಲಿನ ದುಷ್ಟ ಪರಂಪರೆ ನಿವಾರಿಸದೆ ರಾಷ್ಟ್ರದ ಏಳ್ಗೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ ಎಂದು ತಿಳಿಸಿದರು.

ಗುರೂಜಿ ಗೋಳ್ವಾಲ್ಕರ್ ಅವರು ಶಾಶ್ವತ, ಸಮಗ್ರ ಸನಾತನ ಧರ್ಮದ ಚಿಂತಕರಾಗಿದ್ದು, ದೇಶದ ಏಕತೆ ಪ್ರತಿಪಾದಿಸುತ್ತಾ ಬದುಕಿದರು. ಎಲ್ಲದರಲ್ಲೂ ಈಶ್ವರ ಸ್ವರೂಪವನ್ನು ನೋಡಿದವರು. ತಮ್ಮ ದೇಹದ ಕಣ ಕಣದಲ್ಲೂ ಸಾಮಾಜಿಕ ಚಿಂತನೆಯನ್ನು ಅಳವಡಿಸಿಕೊಂಡು ಕಾರ‍್ಯಪ್ರವೃತ್ತರಾದವರು. ಋಗ್ವೇದ, ಅಥರ್ವ ವೇದದಲ್ಲಿ ಅಡಕವಾಗಿದ್ದ ಸಮಾನತೆ, ಸಾಮರಸ್ಯವನ್ನು ಮನಗಂಡು ನಡೆಯಬೇಕು. ಸವರ್ಣೀಯರ ಶ್ರೇಷ್ಠತೆಯ ವ್ಯಸನ, ಅಸ್ಪೃಶ್ಯತೆಯನ್ನು ಅನುಭವಿಸಿದವರ ಕೀಳರಿಮೆ ಹೋಗಬೇಕು ಎಂದು ಅವರು ಹೇಳುತ್ತಿದ್ದರು ಎಂದರು.

'ಹಿಂದೂ ಸಮಾಜದಲ್ಲಿ ಅಸಂಖ್ಯಾತ ಜಾತಿಗಳಿವೆ. ನೂರು ವರ್ಷದ ಹಿಂದೆ ಎಷ್ಟು ಜಾತಿಗಳಿದ್ದವೋ ಈಗ ಸಂಖ್ಯೆ ಹತ್ತು ಪಟ್ಟು ಜಾಸ್ತಿಯಾಗಿದೆ. ಒಂದೊಂದು ಗಣತಿಯಲ್ಲಿಯೂ ಜಾತಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಜಾತಿ ಕಡಿಮೆಯಾಗಬೇಕೆಂಬ ಕೂಗು ಒಂದೆಡೆಯಾದರೆ, ಇನ್ನೊಂದೆಡೆ ಸಮಾಜದಲ್ಲಿ ವ್ಯಕ್ತಿಯ ಪರಿಚಯ




ಅವುಗಳಾಧಾರಿತ ಆಗುತ್ತಿದೆ. ಇದಕ್ಕೆ ಸಾಮಾಜಿಕ, ರಾಜಕೀಯ ಕಾರಣಗಳಿವೆ' ಎಂದು ನುಡಿದರು.

ಅನೇಕ ಮಹನೀಯರು ಶ್ರಮಿಸಿ ನಮ್ಮ ಸಮಾಜದ ಪಿಡುಗುಗಳನ್ನು ತೊಡೆದು ಹಾಕಿದರು. ಅವರು ಒಳ್ಳೆಯ ಚಿಂತನೆಗಳನ್ನು ಅಳವಡಿಸಿಕೊಂಡಿದ್ದರಿಂದ ಸನಾತನ ಧರ್ಮ ಪುನರುತ್ಥಾನ ಕಂಡಿತು. ಆದರ್ಶ ಸಮಾಜ ಏಕಾತ್ಮತೆಯಿಂದ ಕೂಡಿದ್ದು, ಅದು ಇಲ್ಲದಿದ್ದರೆ ಒಳ್ಳೆಯ ಚಿಂತನೆಗಳು ಹೊರಬರಲು ಸಾಧ್ಯವಿಲ್ಲ. ಆಧ್ಯಾತ್ಮಿಕ ತಳಹದಿ ಇಲ್ಲದಿದ್ದರೆ ಸಮಾನತೆಯೂ ಇರುವುದಿಲ್ಲ ಎಂದು ತಿಳಿಸಿದರು.

**ಓದುಗರೇ ಗಮನಿಸಿ**
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.